ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅಶೋಕ್ ಎಸ್. ಕಿಣಗಿ

ಕರ್ನಾಟಕ ಉಚ್ಚ ನ್ಯಾಯಾಲಯ -ವಿರುದ್ಧ-ಸಿ.ಎಂ.ಮಂಜುನಾಥ್ ಮತ್ತು ಇತರರು

ಸ್ವಯಂ ಪ್ರೇರಿತ ಕ್ರಿಮಿನಲ್ ಅರ್ಜಿಸಂಖ್ಯೆ: 3337/2020, ದಿನಾಂಕ 7 ನೇ ಅಕ್ಟೋಬರ್, 2020.

ಆಜ್ಞೆ

ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ:

ದಂಡ ಪ್ರಕ್ರಿಯಾ ಸಂಹಿತೆ, 1973 ರ (ಸಂಕ್ಷಿಪ್ತವಾಗಿ ' ಸಿಆರ್.ಪಿ.ಸಿ. )482 ನೇ ಪ್ರಕರಣದ ಮೇರೆಗಿನ ಈ ಸ್ವಯಂಪ್ರೇರಿತ ಅರ್ಜಿಯಲ್ಲಿ ಪರಿಗಣನೆಗೆ ಉದ್ಭವಿಸಿರುವ ಪ್ರಶ್ನೆಯು ಈ ಕೆಳಗಿನಂತಿದೆ:

" ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾಗಿರುವ ಎರಡನೇ ಪ್ರತಿವಾದಿಗಳ ವಿರುದ್ಧ ಸಿಆರ್.ಪಿ.ಸಿ.ಯ 200 ನೇ ಪ್ರಕರಣದ ಅಡಿಯಲ್ಲಿ ಮೊದಲನೇ ಪ್ರತಿವಾದಿಗಳು ಸಲ್ಲಿಸಿದ ದೂರು, ನ್ಯಾಯಾಧೀಶರ (ಸಂರಕ್ಷಣಾ) ಅಧಿನಿಯಮ, 1985 ರ 3 ನೇ ಪ್ರಕರಣದ 1 ನೇ ಉಪ-ಪ್ರಕರಣದ ದೃಷ್ಟಿಯಿಂದ ಸಮರ್ಥನೀಯವಾಗಿದೆಯೇ? "

2. ಮೊಕದ್ದಮೆಯ ಸಂಗತಿಗಳನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸುವುದು ಅಗತ್ಯವಾಗಿದೆ.

ಮೊದಲನೇ ಪ್ರತಿವಾದಿ-ದೂರುದಾರರ ಏಳು ವರ್ಷಗಳ ಮಗನು ಅನಾರೋಗ್ಯಪೀಡಿತನಾಗಿದ್ದನು ಮತ್ತು ಆತನನ್ನು ವೈದ್ಯರ ಬಳಿ ಕರೆದುಕೊಂಡು 0 ಹೋಗಲಾಗಿತ್ತು; ಅವರು ಈ ರೋಗಿಯನ್ನು ಚಿಕಿತ್ಸೆಗಾಗಿ ದಾವಣಗೆರೆಯಲ್ಲಿರುವ ಒಂದು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸೂಚಿಸಿದರು; ಅಲ್ಲಿ ಮೊದಲನೇ ಪ್ರತಿವಾದಿಗಳ ಮಗನನ್ನು ಆಸ್ಪತ್ರೆಗೆ ಸೇರಿಸಲಾಯಿತು; ಮೊದಲನೇ ಪ್ರತಿವಾದಿಗಳ ಮಗನನ್ನು ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಇರಿಸುವಾಗ, ದುರದೃಷ್ಟವಶಾತ್ ಮರಣ ಹೊಂದಿದನು; ಭಾರತ ದಂಡ ಸಂಹಿತೆಯ (ಸಂಕ್ಷಿಪ್ತವಾಗಿ ' ಐಪಿಸಿ) 304 ಎ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧ ಎಸಗಿರುವುದಾಗಿ ಆರೋಪಿಸಿ ವೈದ್ಯರು ಮತ್ತು ಇತರರ ವಿರುದ್ಧ ಕೂಡ್ಲಿಗಿಯ ಪೊಲೀಸ್ ಠಾಣೆಯಲ್ಲಿ ಮೊದಲನೇ ಪ್ರತಿವಾದಿಗಳು ಕೂಡಲೇ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿದ್ದರು.ಮೊದಲನೇ ಪ್ರತಿವಾದಿಗಳು ಸದರಿ ಅಪರಾಧದ ತನಿಖೆಯನ್ನು ಕೇಂದ್ರ ತನಿಖಾ ಸಂಸ್ಥೆಗೆ ವರ್ಗಾಯಿಸಲು ಕೋರಿ ಈ ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿದ್ದರು.ವಿಷಯ ಕುರಿತು ಈ ನ್ಯಾಯಾಲಯವು ವ್ಯವಹರಿಸುವ ಮೊದಲೇ, ' ಬಿ ' ವರದಿಯನ್ನು ಸಲ್ಲಿಸಲಾಗಿತ್ತು, ಅದರ ವಿರುದ್ಧ ಪ್ರತಿಭಟನಾ ಅರ್ಜಿಯನ್ನು ಮೊದಲನೇ ಪ್ರತಿವಾದಿಗಳು ದಾಖಲಿಸಿದ್ದರು.

3. ಮೊದಲನೇ ಪ್ರತಿವಾದಿಗಳ ವಾದದ ಪ್ರಕಾರ, ಅಹನಾ ಸೌಹಾರ್ದ ಪತ್ತಿನ ಸಹಕಾರ ಸಂಘ ನಿಯಮಿತದ ವ್ಯವಸ್ಥಾಪಕರು ಅವರ ಬಳಿ ಬಂದು, ಸದರಿ ಪತ್ತಿನ ಸಂಘದಿಂದ ಅವರು ಪಡೆದುಕೊಂಡಿರುವರೆಂದು ಆರೋಪಿಸಲಾಗಿದ್'ದ ಎರಡು ಲಕ್ಷ ರೂಪಾಯಿಗಳ ಮೊತ್ತದ ಸಾಲವನ್ನು ಮರುಪಾವತಿ ಮಾಡಲು ಅವರನ್ನು ಕೇಳಿದರು.ಮೊದಲನೇ ಪ್ರತಿವಾದಿಗಳ ವಾದದ ಪ್ರಕಾರ, ಕೇವಲ ನಲವತ್ತೈದು ಸಾವಿರ ರೂಪಾಯಿಗಳ

ಮೊತ್ತವನ್ನು ಮಾತ್ರ ಪಡೆಯಲಾಗಿತ್ತು.ಅದನ್ನು ಮರುಪಾವತಿ ಮಾಡಲಾಗಿದೆ ಎಂಬುದಾಗಿ ಸಂಘದ ಸದರಿ ವ್ಯವಸ್ಥಾಪಕರಿಗೆ ತಿಳಿಸಿದರು.ಅವರ ವಾದದ ಪ್ರಕಾರ, ಎಲ್ಲಾ ಮೊತ್ತವನ್ನು ಮರು-ಪಾವತಿ ಮಾಡಿದ ನಂತರ, ಸದರಿ ಪತ್ತಿನ ಸಂಘವು, ಅವರು ಅಡಮಾನ ಇಟ್ಟಿದ್ದ ಸ್ವತ್ತಿನ ಸಂಬಂಧದಲ್ಲಿ ನೋಂದಾಯಿತ ಮರು-ಹಸ್ತಾಂತರಣ ಪತ್ರವನ್ನು ಸಹ ಬರೆದುಕೊಟ್ಟಿದ್ದರು.ಸದರಿ ವ್ಯವಸ್ಥಾಪಕರ ಮೇಲೆದಿನಾಂಕ: 27 ನೇ ಅಕ್ಟೋಬರ್ 2017 ರಂದು ಮೊದಲನೇ ಪ್ರತಿವಾದಿಗಳು ದೂರನ್ನು ದಾಖಲಿಸಿದರು.ಸದರಿ ವ್ಯವಸ್ಥಾಪಕರು ಸಹ ದೂರನ್ನು ದಾಖಲಿಸಿದ್ದು, ಅದನ್ನು ಅಪರಾಧಸಂಖ್ಯೆ: 191/2016 ಎಂದು ನೋಂದಾಯಿಸಲಾಗಿತ್ತು ಮತ್ತು ಇದರ ಸಂಬಂಧವಾಗಿ ಮೊದಲನೇ ಪ್ರತಿವಾದಿಗಳನ್ನು ದಸ್ತಗಿರಿ ಮಾಡಲಾಗಿತ್ತು.ಎರಡನೇ ಪ್ರತಿವಾದಿಯಾದ, ನ್ಯಾಯಿಕ ಅಧಿಕಾರಿಯವರ ಮುಂದೆ ಅವರ ಗೃಹ ಕಚೇರಿಯಲ್ಲಿ ಪೊಲೀಸರು ಮೊದಲನೇ ಪ್ರತಿವಾದಿಯನ್ನು ಹಾಜರುಪಡಿಸಿದ್ದರು.ಮೊದಲನೇ ಪ್ರತಿವಾದಿಯ ವಾದದ ಪ್ರಕಾರ, ಐಪಿಸಿಯ 304 ಎ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ವೈದ್ಯರು ಮತ್ತು ಆಸ್ಪತ್ರೆಯ ಮೇಲೆ ಅವರು ನೋಂದಾಯಿಸಿದ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಲು ಎರಡನೇ ಪ್ರತಿವಾದಿಗಳು ಅವರನ್ನು ಕೇಳಿದ್ದರು.ಮೊದಲನೇ ಪ್ರತಿವಾದಿ ಪ್ರಕಾರ, ಸದರಿ ದೂರನ್ನು ಹಿಂತೆಗೆದುಕೊಂಡರೆ, ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗುವುದೆಂದು ಮತ್ತು ದೂರನ್ನು ಹಿಂತೆಗೆದುಕೊಳ್ಳದೆ ಇದ್ದರೆ, ಅಭಿರಕ್ಷೆಗೆ ತೆಗೆದುಕೊಳ್ಳಲಾಗುವುದೆಂದು ಎರಡನೇ ಪ್ರತಿವಾದಿಗಳು ಅವರಿಗೆ ತಿಳಿಸಿದ್ದರು.ಮೊದಲನೇ ಪ್ರತಿವಾದಿಯ ವಾದದ ಪ್ರಕಾರ, ಎರಡನೇ ಪ್ರತಿವಾದಿಗಳು ಪೊಲೀಸರಿಗೆ ಮಾರನೇ ದಿನ ನ್ಯಾಯಾಲಯದಲ್ಲಿ ಅವರನ್ನು ಹಾಜರುಪಡಿಸಲು ನಿರ್ದೇಶಿಸಿದ್ದರು.ಈ ಅರ್ಜಿಯ ದೂರಿನ ವಸ್ತುವಿಷಯದಲ್ಲಿ ಆರೋಪಿಯಾಗಿ ದೋಷಾರೋಪಣೆ ಮಾಡಿದಂಥ ಪೊಲೀಸ್ ಅಧಿಕಾರಿಗಳು, ಪೊಲೀಸ್ ಠಾಣೆಯಲ್ಲಿ, ವೈದ್ಯರು ಮತ್ತು ಆಸತ್ರೆಯ ವಿರುದ್ಧ ದಾಖಲಿಸಿದ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಲು ಮೊದಲನೇ ಪ್ರತಿವಾದಿಯನ್ನು ಒತ್ತಾಯಿಸಿದರೆಂದು ಹೇಳಲಾಗಿದೆ.ಮಾರನೇ ದಿನದಂದು ಎಂದರೆ, 2 ನೇ ಡಿಸೆಂಬರ್, 2017 ರಂದು, ಮೊದಲನೇ ಪ್ರತಿವಾದಿಯನ್ನು ಎರಡನೇ ಪ್ರತಿವಾದಿಗಳ ಮುಂದೆ ಹಾಜರುಪಡಿಸಿದ್ದಾಗ, ಅವರನ್ನು ಹದಿನಾಲ್ಕು ದಿನಗಳ ಅಭಿರಕ್ಷೆಗೆ ಕಳುಹಿಸಲಾಗಿತ್ತು.ಈ ನಡುವೆ, ವೈದ್ಯರು ಮತ್ತು ಆಸ್ಪತ್ರೆಯ ವಿರುದ್ಧ ಮೊದಲನೇ ಪ್ರತಿವಾದಿಯು ದಾಖಲಿಸಿದ್ದ ಪ್ರಕರಣವನ್ನು ವಜಾಗೊಳಿಸಲಾಗಿತ್ತು ಎಂದು ಮೊದಲನೇ ಪ್ರತಿವಾದಿಯು ಆರೋಪಿಸಿರುವರು.ಈ ಅರ್ಜಿಯ ದೂರಿನ ವಸ್ತುವಿಷಯದಲ್ಲಿ ಆರೋಪಿಯಾಗಿ ತೋರಿಸಿರುವ ಇತರ ವ್ಯಕ್ತಿಗಳ ಜೊತೆಗೆ ಮೊದಲನೇ ಪ್ರತಿವಾದಿಯನ್ನು ಯಾರ ಮುಂದೆ ಹಾಜರುಪಡಿಸಲಾಗಿತ್ತೋ ಆ ಎರಡನೇ ಪ್ರತಿವಾದಿಗಳು ಮೊದಲನೇ ಪ್ರತಿವಾದಿಯ ವಿರುದ್ಧ ದಾಖಲಿಸಲಾಗಿದ್ದ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ನೋಡಿಕೊಂಡರು ಎಂಬುದು ಮೊದಲನೆಯ ಪ್ರತಿವಾದಿಯ ಆರೋಪವಾಗಿದೆ.ಎರಡನೇ ಪ್ರತಿವಾದಿ-ನ್ಯಾಯಿಕ ಅಧಿಕಾರಿಗಳು, ತಮ್ಮ ನ್ಯಾಯಿಕ ಅಧಿಕಾರಗಳನ್ನು ದುರ್ಬಳಕೆ ಮಾಡಿಕೊಂಡು, ಐಪಿಸಿಯ 34 ನೇ ಪ್ರಕರಣದೊಂದಿಗೆ ಓದಲಾಗುವ 166, 205, 120 ಎ, 211, 219 ನೇ ಪ್ರಕರಣಗಳ ಮೇರೆಗೆ ಹಾಗೂ ಐಪಿಸಿಯ 9 499 ನೇ ಪ್ರಕರಣದ ಮೇರೆಗೆ ದಂಡನೀಯ ಅಪರಾಧಗಳನ್ನು ಎಸಗಿರುತ್ತಾರೆ ಎಂಬುದು ಆರೋಪವಾಗಿದೆ.

4. ಸಿಆರ್.ಪಿ.ಸಿ.ಯ 200 ನೇ ಪ್ರಕರಣದ ಮೇರೆಗೆ ಮೇಲೆ ಹೇಳಿದ ದೂರನ್ನು ದಾಖಲಿಸುವ ಮೊದಲು, ಮೊದಲನೇ ಪ್ರತಿವಾದಿಗಳು ಮುಖ್ಯ ನ್ಯಾಯಮೂರ್ತಿಗಳಿಗೆ ಮತ್ತು ಈ ನ್ಯಾಯಾಲಯದ ವಿಲೇಖಾನಾಧಿಕಾರಿಗಳಿಗೆ ದೂರನ್ನು ಸಲ್ಲಿಸಿ, ಎರಡನೇ ಪ್ರತಿವಾದಿಗಳ ಮೇಲೆ ಅಭಿಯೋಜನೆಗಾಗಿ

ಅನುಮತಿಯನ್ನು ನೀಡಲು ಕೋರಿದ್ದರು.ಅದು ಮೇಲೆ ವಿವರಿಸಿದ ಆರೋಪಗಳನ್ನಾಧರಿಸಿತ್ತು.13 ನೇ ಜೂನ್, 2019 ರಂದು ಸದರಿ ದೂರಿಗೆ ಮುಖ್ಯ ನ್ಯಾಯಮೂರ್ತಿಗಳ ಕಚೇರಿಯು ಈ ಮುಂದಿನಂತೆ ಉತ್ತರಿಸಿತ್ತು:

" ಮಾನ್ಯ ಶ್ರೀ ಸಿ.ಎಮ್. ಮಂಜುನಾಥ್ರವರೇ,

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿಗಳನ್ನು ಉದ್ದೇಶಿಸಿ ನೀವು ಬರೆದ ಪತ್ರದಿನಾಂಕ: 27.05.2019 ನ್ನು ನಿರ್ದೇಶನದಂತೆ ಆದೇಶಗಳಿಗಾಗಿ ಮಂಡಿಸಲಾಗಿದ್ದು, ನೀವು ನ್ಯಾಯಾಂಗದ ಪರ ಕ್ರಮಗಳನ್ನು ತೆಗೆದುಕೊಳ್ಳಬಹುದಾಗಿದೆ.

ನಿಮ್ಮ ಮಾಹಿತಿಗಾಗಿ ಕಳುಹಿಸಲಾಗಿದೆ. " ಕರ್ನಾಟಕ ಉಚ್ಚ ನ್ಯಾಯಾಲಯ -ವಿರುದ್ಧ-ಸಿ.ಎಂ.ಮಂಜುನಾಥ್ ಮತ್ತು ಇತರರು 577

5. ಆ ತರುವಾಯ, ಈ ಅರ್ಜಿಯ ವಸ್ತುವಿಷಯವಾಗಿರುವ ಸಿಆರ್.ಪಿ.ಸಿ.ಯ 200 ನೇ ಪ್ರಕರಣದ ಮೇರೆಗೆ ಮೊದಲನೇ ಪ್ರತಿವಾದಿಯು, ಎರಡನೇ ಪ್ರತಿವಾದಿಗಳು ಮತ್ತು ಇತರ ಒಂಭತ್ತು ಆರೋಪಿಗಳ ವಿರುದ್ಧ ಬಳ್ಳಾರಿಯ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಮುಂದೆ ಖಾಸಗಿ ದೂರನ್ನು ಸಲ್ಲಿಸಿದ್ದು, ಅದನ್ನು ಅವರು ಹಗರಿಬೊಮ್ಮನಹಳ್ಳಿಯ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರಿಗೆ ರವಾನಿಸಿದ್ದರು.20 ನೇ ಜನವರಿ, 2020 ರಂದು, ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರು, ಮೊದಲನೇ ಪ್ರತಿವಾದಿಗಳ ಪ್ರಮಾಣಪೂರ್ವಕ ಹೇಳಿಕೆ ಸಂಬಂಧದಲ್ಲಿ ದೂರನ್ನು ತಡೆಹಿಡಿಯಲು ನಿರ್ದೇಶಿಸಿದರೆಂದು ಸದರಿ ಖಾಸಗಿ ದೂರಿನ ಮೇಲೆ ಹೊರಡಿಸಲಾದ ಆದೇಶಗಳಿಂದ ತಿಳಿದುಬರುತ್ತದೆ.

6. ಈ ನ್ಯಾಯಾಲಯದದಿನಾಂಕ: 21 ನೇ ಜುಲೈ, 2020 ರ ಆದೇಶದ ಮೂಲಕ, ಎರಡನೇ ಪ್ರತಿವಾದಿ-ನ್ಯಾಯಿಕ ಅಧಿಕಾರಿಗಳಿಗೆ ಸಂಬಂಧ ಪಡುವಷ್ಟರಮಟ್ಟಿಗೆ ಮಾತ್ರ ಮೊದಲನೇ ಪ್ರತಿವಾದಿಗಳು ಸಲ್ಲಿಸಿದ ಸದರಿ ದೂರನ್ನು ರದ್ದುಗೊಳಿಸಲು ಸಿಆರ್.ಪಿ.ಸಿ.ಯ 482 ನೇ ಪ್ರಕರಣದ ಅಡಿಯಲ್ಲಿ ಸ್ವಯಂ ಪ್ರೇರಿತ ಕ್ರಿಮಿನಲ್ ಅರ್ಜಿಯನ್ನು ಸಲ್ಲಿಸಲು ನಿರ್ದೇಶನವನ್ನು ನೀಡಲಾಗಿತ್ತು.

7. ಪ್ರಾಥಮಿಕ ಸುನಾವಣೆಯ ಹಂತದಲ್ಲಿ ಅರ್ಜಿಯನ್ನು ಅಂತಿಮವಾಗಿ ವಿಲೇ ಮಾಡತಕ್ಕದ್ದೆಂಬ ನಿರ್ದಿಷ್ಟ ನಿರ್ದೇಶನದೊಂದಿಗೆ 27 ನೇ ಜುಲೈ, 2020 ರಂದು ಮೊದಲನೇ ಪ್ರತಿವಾದಿಗೆ ಈ ಅರ್ಜಿಯನ್ನು ಕುರಿತ ನೋಟೀಸನ್ನು ನೀಡಲಾಗಿತ್ತು.ತರುವಾಯದಲ್ಲಿ, ನ್ಯಾಯಾಲಯ ಸಲಹೆಗಾರನಾಗಿ (amicus curiae) ಈ ನ್ಯಾಯಾಲಯಕ್ಕೆ ನೆರವು ನೀಡಲು ಶ್ರೀ ವಿಕ್ರಮ್ ಹುಯಿಲಗೋಳ್, ಮಾನ್ಯ ನ್ಯಾಯವಾದಿ ಇವರನ್ನು ಈ ನ್ಯಾಯಾಲಯವು ನೇಮಕ ಮಾಡಿತ್ತು, ಅವರು 11 ನೇ ಸೆಪ್ಟೆಂಬರ್, 2020 ರಂದು ಲಿಖಿತ ನಿವೇದನೆಗಳನ್ನು ಸಲ್ಲಿಸಿದರು.

8. ನಾವು ಮಾನ್ಯ ನ್ಯಾಯಾಲಯ ಸಲಹೆಗಾರರು ಹಾಗೂ ಮೊದಲನೇ ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿದ್ದೇವೆ.

9. ಮಾನ್ಯ ನ್ಯಾಯಾಲಯ ಸಲಹೆಗಾರರು ಲಿಖಿತ ನಿವೇದನೆಗಳನ್ನು ಸಲ್ಲಿಸಿರುವರು.ಅವರು ಎರಡನೇ ಪ್ರತಿವಾದಿಗಳು ತಮ್ಮ ನ್ಯಾಯಿಕ ಕರ್ತವ್ಯವನ್ನು ನಿರ್ವಹಿಸುವ ಅವಧಿಯಲ್ಲಿ ಕೈಗೊಂಡ ಕ್ರಮಗಳನ್ನಾಧರಿಸಿ,

ಅವರ ವಿರುದ್ಧ ಮೊದಲನೇ ಪ್ರತಿವಾದಿಯು ದಾಖಲಿಸಿದ ದೂರಿನಲ್ಲಿ ಆರೋಪಗಳನ್ನು ಮಾಡಲಾಗಿದೆ ಎಂದು ನಿವೇದಿಸಿದರು.ನ್ಯಾಯಾಧೀಶರ (ಸಂರಕ್ಷಣಾ) ಅಧಿನಿಯಮ, 1985 ರ (ಸಂಕ್ಷಿಪ್ತವಾಗಿ 1985 ರ ಸದರಿ ಅಧಿನಿಯಮ) 3ನೇ ಪ್ರಕರಣದ (1) ನೇ ಉಪ ಪ್ರಕರಣವು, ಎರಡನೇ ಪ್ರತಿವಾದಿಗಳನ್ನು ಅಭಿಯೋಜನೆಯಿಂದ ಸಂಪೂರ್ಣವಾಗಿ ಸಂರಕ್ಷಿಸುತ್ತದೆ ಎಂದು ಅವರು ನಿವೇದಿಸಿಕೊಂಡಿರುವರು.ಅವರು, ಇ.ಎಸ್. ಸಂಜೀವ ರಾವ್ -ವಿರುದ್ಧ-ಕೇಂದ್ರೀಯ ತನಿಖಾ ಸಂಸ್ಥೆ (ಸಿ.ಬಿ.ಐ) ಮುಂಬೈ ಮತ್ತು ಇತರರು ಮೊಕದ್ದಮೆಯಲ್ಲಿ ಬಾಂಬೆ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ನಿರ್ಣಯವನ್ನು ಅವಲಂಬಿಸಿದ್ದಾರೆ.ಅವರು, ನೀಲೇಶ್ ಸಿ. ಒಝಾ-ವಿರುದ್ಧ ಮಹಾರಾಷ್ಟ್ರ ರಾಜ್ಯ ಮೊಕದ್ದಮೆಯಲ್ಲಿ ಬಾಂಬೆ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ನಿರ್ಣಯವನ್ನು ಸಹ ಅವಲಂಬಿಸಿದ್ದಾರೆ ಹಾಗೂ ಅದರಲ್ಲಿ ವಿಧಿಸಿದ ನಿಯಮವು ಸ್ಪಷ್ಟವಾಗಿ ಈ ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವುದೆಂದು ನಿವೇದಿಸಿಕೊಂಡಿದ್ದಾರೆ.ಮುಖ್ಯ ನ್ಯಾಯಾಧೀಶರ ಕಚೇರಿಯು ನೀಡಿದದಿನಾಂಕ: 13 ನೇ ಜೂನ್, 2019 ರ ಪತ್ರದಿಂದ, 2 ನೇ ಪ್ರತಿವಾದಿಯನ್ನು ಅಭಿಯೋಜನೆಗೊಳಪಡಿಸುವ ಕುರಿತು ಮಂಜೂರಾತಿ ನೀಡಲು ಎಂದಿಗೂ ಉದ್ದೇಶಿಸಿರಲಿಲ್ಲವೆಂಬುದು ತಿಳಿದುಬರುತ್ತದೆ.ಈ ಅಂಶವನ್ನು ಕುರಿತು ಅವರು, ಆರ್.ಎಸ್. ನಾಯಕ್ -ವಿರುದ್ಧ-ಎ.ಆರ್.ಅಂತುಳೆ ಆ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಅವಲಂಬಿಸಿದ್ದಾರೆ.

10. ಮೊದಲನೇ ಪ್ರತಿವಾದಿ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಸಿಆರ್.ಪಿ.ಸಿ.ಯ 482 ನೇ ಪ್ರಕರಣದ ಮೇರೆಗಿನ ಈ ನ್ಯಾಯಾಲಯದ ಸ್ವಯಂಪ್ರೇರಣಾ ಅಧಿಕಾರವನ್ನು, ಸಾರ್ವಜನಿಕ ಹಿತಾಸಕ್ತಿಯಿರುವಂಥ ಮೊಕದ್ದಮೆಗಳಲ್ಲಿ ಮಾತ್ರವೇ ಚಲಾಯಿಸಬಹುದಾಗಿದೆ ಮತ್ತು ಆದುದರಿಂದ, ಈ ಮೊಕದ್ದಮೆಯಲ್ಲಿನ ಅಧಿಕಾರ ಚಲಾವಣೆಯು ಅನಾವಶ್ಯಕವೆಂದು ನಿವೇದಿಸಿಕೊಂಡಿದ್ದಾರೆ.ಎರಡನೆಯದಾಗಿ, ಒಬ್ಬ ಸಾಮಾನ್ಯವಾಗಿ ಮೊದಲನೇ ಪ್ರತಿವಾದಿಯು, ಎರಡನೇ ಪ್ರತಿವಾದಿ-ನ್ಯಾಯಿಕ ಅಧಿಕಾರಿಯನ್ನು ಅಭಿಯೋಜನೆಗೊಳಪಡಿಸಲು ಅನುಮತಿ ಅಥವಾ ಮಂಜೂರಾತಿ ನೀಡಿದ್ದಂಥ ಮುಖ್ಯ ನ್ಯಾಯಾಧೀಶರ ಕಾರ್ಯದರ್ಶಿಗಳು ನೀಡಿದದಿನಾಂಕ: 13 ನೇ ಜೂನ್ 9, 2019 ರ ಪತ್ರದಿಂದ ನಿರ್ಣಯವನ್ನು ತರ್ಕಿಸಿರುವುದು ಸಕಾರಣವಾಗಿಯೇ ಇದೆ ಎಂದು ನಿವೇದಿಸಿಕೊಂಡಿದ್ದಾರೆ.ಅವರು, ಡಾ. ವೈ.ಎಸ್. ಭಾಸ್ಕರ ರಾವ್ -ವಿರುದ್ಧ ಕರ್ನಾಟಕ ರಾಜ್ಯ ಐಎಲ್ಆರ್ 2017 ಕೆಆರ್ 3895. ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರ ನಿರ್ಣಯವನ್ನು ಅವಲಂಬಿಸಿದ್ದಾರೆ.ಅವರು, ಶರಣಪ್ಪ ವಿರುದ್ಧ ಕರ್ನಾಟಕ ರಾಜ್ಯ ಐಎಲ್ಆರ್ 2015 ಕೆಎಆರ್ 6012 ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರ ಮತ್ತೊಂದು ನಿರ್ಣಯವನ್ನು ಸಹ ಅವಲಂಬಿಸಿದ್ದಾರೆ.ಈ ನ್ಯಾಯಾಲಯವು ವಿಧಿಸಿದ ನಿಯಮದ ದೃಷ್ಟಿಯಲ್ಲಿ, ಸದರಿ ಎರಡು ನಿರ್ಣಯಗಳಲ್ಲಿ ಹಸ್ತಕ್ಷೇಪವನ್ನು ಸಮರ್ಥಿಸುವ ಸಂದರ್ಭವೇ ಇಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.

11. ಮೇಲಿನ ನಿವೇದನೆಗಳನ್ನು ನಾವು ಎಚ್ಚರಿಕೆಯಿಂದ ಪರಿಗಣಿಸಿದ್ದೇವೆ.ಈ ಅರ್ಜಿಯ ವಸ್ತುವಿಷಯವಾಗಿರುವ ಮೊದಲನೇ ಪ್ರತಿವಾದಿಯು ದಾಖಲಿಸಿದ ದೂರನ್ನು ಸಹ ನಾವು ಎಚ್ಚರಿಕೆಯಿಂದ ಅವಲೋಕಿಸಿದ್ದೇವೆ.ದೂರಿನ VIII ನೇ ಕಂಡಿಕೆಯಲ್ಲಿ ಎರಡನೇ ಪ್ರತಿವಾದಿಗಳ ವಿರುದ್ಧ ಮಾಡಿದ ಆರೋಪಗಳು ಕಂಡುಬರುತ್ತವೆ.ಈ ಹಿಂದೆ ಹೇಳಿದಂತೆ, ಒಂದನೇ ಪ್ರತಿವಾದಿಯು ದಾಖಲಿಸಿದ ದೂರಿನಲ್ಲಿ ಎರಡನೇ ಪ್ರತಿವಾದಿಗಳು 1 ನೇ ಆರೋಪಿಯಾಗಿದ್ದಾರೆ.VIII ನೇ ಕಂಡಿಕೆಯಲ್ಲಿರುವ ಸಂಬಂಧಪಟ್ಟ ಆರೋಪಗಳನ್ನು ಈ ಕೆಳಗಿನಂತೆ ಓದಲಾಗಿದೆ:

"ದಿನಾಂಕ: 2.12.2017 ರಂದು ದೂರುದಾರರನ್ನು ದಸ್ತಗಿರಿ ಮಾಡುವ ಮೂಲಕ ಸದರಿ 3 ನೇ ಮತ್ತು 4 4 ನೇ ನೇ ಆರೋಪಿಗಳು ಹಗರಿಬೊಮ್ಮನಹಳ್ಳಿಯ ಮಾನ್ಯ ಕಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ, ಎಂದರೆ 1 ನೇ ಆರೋಪಿಯ ಮನೆಗೆ ರಾತ್ರಿ ಸುಮಾರು 9.30 ಗಂಟೆಗೆ ಕರೆದುಕೊಂಡು ಹೋಗಿ, ಅವರ ಮುಂದೆ ಹಾಜರುಪಡಿಸಿದರು.1 ನೇ ಆರೋಪಿಯವರು, ಎಸ್.ಎಸ್. ಹೈ-ಟೆಕ್ ಆಸ್ಪತ್ರೆ ವಿರುದ್ಧ ದಾವಣಗೆರೆಯಲ್ಲಿ ದಾಖಲಿಸಿದ ಪ್ರಕರಣವನ್ನು ಹಿಂತೆಗೆದುಕೊಳ್ಳಲು ಕೇಳಿದರು ಮತ್ತು ಹಾಗಿದ್ದರೆ ಅವರು ದೂರುದಾರನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವರೆಂದು, ಇಲ್ಲದೇ ಹೋದರೆ ಅವರನ್ನು ಅಭಿರಕ್ಷೆಗೆ ತೆಗೆದುಕೊಂಡು, ಹಾಜರಾಗದೆ ಇರುವುದಕ್ಕಾಗಿ ಸದರಿ ಮೊಕದ್ದಮೆಯನ್ನು ವಜಾಗೊಳ್ಳುವಂತೆ ನೋಡಿಕೊಳ್ಳುವುದಾಗಿ ತಿಳಿಸಿದರು.ದೂರುದಾರರು ತನ್ನ 7 ವರ್ಷಗಳ ಮಗುವನ್ನು ಕಳೆದುಕೊಂಡು ಬಹಳಷ್ಟು ನೋವು ಅನುಭವಿಸಿರುವರೆಂಬುದನ್ನು ತಿಳಿಸಿ, ದೂರು ಹಿ 0 ಪಡೆಯಲು ಖಡಾಖಂಡಿತವಾಗಿ ನಿರಾಕರಿಸಿದರು.ನಂತರ 1 ನೇ ಆರೋಪಿಯವರು ಸದರಿ ಪೊಲೀಸ್ ಅಧಿಕಾರಿಗಳಿಗೆ ದೂರುದಾರರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ, ಬೆಳಿಗ್ಗೆ ಹಾಜರುಪಡಿಸಲು ನಿರ್ದೇಶಿಸಿದರು.ಪೊಲೀಸ್ ಅಧಿಕಾರಿಗಳು ದೂರುದಾರರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ 2.12.2017 ರ ಇಡೀ ರಾತ್ರಿ ಇರಿಸಿಕೊಂಡರು ಮತ್ತು ಅಲ್ಲಿ ಅವರು ದಾವಣಗೆರೆಯಲ್ಲಿನ ಪ್ರಕರಣವನ್ನು ಒಪ್ಪಿಕೊಂಡು, ದೂರನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿದರು ಹಾಗೂ ಬೆಲ್ಟಿನಿಂದ ಹೊಡೆದು ದೂರುದಾರರ ಮೇಲೆ ಹಲ್ಲೆ ಮಾಡಿದರು ಮತ್ತು ಅಷ್ಟೇ ಅಲ್ಲದೆ ಅವರು, ದೈಹಿಕ ವಿಕಲಾಂಗತೆ ಹೊಂದಿರುವ ದೂರುದಾರರ ಸ್ಥಿತಿಯನ್ನು ನೋಡಿಯೂ ಸಹ ಗಮನ ಹರಿಸಲಿಲ್ಲ.ಮಾರನೇ ದಿನದಂದು ಅವರು ದೂರುದಾರರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋದರು ಮತ್ತು ಅಲ್ಲಿ ಮಾನ್ಯ ಕಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಹಗರಿಬೊಮ್ಮನಹಳ್ಳಿ -1 ನೇ ಆರೋಪಿ ಇವರು, 14 ದಿನಗಳ ಅಭಿರಕ್ಷೆಗೆ ಆದೇಶಿಸಿದರು ಹಾಗೂ ಈ ನಡುವೆ,ದಿನಾಂಕ: 16.12.2017 ರವರೆಗೆ ಜಾಮೀನು ಅರ್ಜಿಯ ಮೇಲಿನ ಸುನಾವಣೆ ಮಾಡಲು ಅವರು ಗಮನ ನೀಡದಿರುವಾಗ, ದಾವಣಗೆರೆ ನ್ಯಾಯಾಲಯದಲ್ಲಿನ ಮೊಕದ್ದಮೆಯನ್ನು ಸದರಿ ದಿನಾಂಕದಂದು ಪ್ರಮಾಣಪೂರ್ವಕ ಹೇಳಿಕೆ ಪಡೆಯಲು ಮುಂದೆ ಹಾಕಲಾಗಿತ್ತು.ಸದರಿ ಮೊಕದ್ದಮೆಯನ್ನು 1 ನೇ ಆರೋಪಿಯವರ ಮತ್ತು ಮೇಲೆ ಹೇಳಿದ 3 ರಿಂದ 9 ರವರೆಗಿನ ಆರೋಪಿಗಳಾದ ಪೊಲೀಸ್ ಅಧಿಕಾರಿಗಳ ಮೇಲೆ ಹೇಳಿದ ಸದರಿ ಕೃತ್ಯದ ಸಂಬಂಧದಲ್ಲಿ ವಜಾಗೊಳಿಸಲಾಗಿತ್ತು.ದೂರುದಾರರು ಮೇಲ್ಮನವಿ ನ್ಯಾಯಾಲಯದ ಮುಂದೆ ಅದನ್ನು ಪ್ರಶ್ನಿಸಿದರು.ಸದರಿ ಸಿವಿಲ್ ನ್ಯಾಯಾಧೀಶರು 1 ನೇ ಆರೋಪಿ ಹಾಗೂ 2 ರಿಂದ 9 ರವರೆಗಿನ ಆರೋಪಿಗಳು, ದಾವಣಗೆರೆ ನ್ಯಾಯಾಲಯದಲ್ಲಿ ದೂರುದಾರರು ಸಲ್ಲಿಸಿದ ಕ್ರಿಮಿನಲ್ ಮೊಕದ್ದಮೆಯನ್ನು ನೋಡಿಕೊಳ್ಳುವ ಸಾಮಾನ್ಯ ಉದ್ದೇಶದಿಂದ ನಿಕಟರಾಗಿದ್ದಾರೆ.ಹಾಗಾಗಿ, 1 ನೇ ಆರೋಪಿಯವರು ತಮ್ಮ ನ್ಯಾಯಿಕ ಅಧಿಕಾರಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಹಾಗೂ ಐಪಿಸಿಯ 166, 205, 120 ಎ, 211, 219, 34 ಮತ್ತು 499 ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧವನ್ನು ಎಸಗಿದ್ದಾರೆ.ಈ ರೀತಿಯ ವ್ಯಕ್ತಿಗಳು ನ್ಯಾಯಿಕ ವ್ಯವಸ್ಥೆಯಲ್ಲಿರುವುದು ಅತ್ಯಂತ ದುರದೃಷ್ಟಕರವಾದುದಾಗಿದೆ.ನ್ಯಾಯಿಕ ವ್ಯವಸ್ಥೆಯಲ್ಲಿ ಈ ರೀತಿಯ ನ್ಯಾಯಾಧೀಶರ ಕ್ರಿಮಿನಲ್ ಕೃತ್ಯದಿಂದಾಗಿ ಜನತೆ ನ್ಯಾಯಾಂಗ ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಳ್ಳುವರು.ಇದಲ್ಲದೆ, 1 ನೇ ಆರೋಪಿಯು, ತಮ್ಮ ಹಣಕಾಸು ಲಾಭಗಳಿಗಾಗಿ ದಲ್ಲಾಳಿಯಾಗಿರುವ ಪೊಲೀಸರ ಎಂದರೆ ನ್ಯಾಯಾಲಯ ಪೊಲೀಸರಾದ 9 ನೇ

ಆರೋಪಿಯವರ ನಿರ್ದೇಶನಗಳಿಗನುಗುಣವಾಗಿ ಆದೇಶಗಳನ್ನು ಹೊರಡಿಸುತ್ತಿರುವರೆಂಬುದನ್ನು ಮತ್ತು ದೂರುದಾರರ ಬಿಡುಗಡೆಗಾಗಿ ಅವರು 30,000/- ರೂ.ಗಳ ಹಣದ ಬೇಡಿಕೆ ಇಟ್ಟಿದ್ದರೆಂಬುದನ್ನು ಮಾನ್ಯ ನ್ಯಾಯಾಲಯದ ದಯಾಪರ ಅವಗಾಹನೆಗೆ ತರಲಾಗಿದೆ. "(ಗೆರೆ ಹಾಕಿದ್ದಕ್ಕೆ ಒತ್ತು ನೀಡಲಾಗಿದೆ)

ಮುಖ್ಯ ನ್ಯಾಯಾಧೀಶರು IX ನೇ ಕಂಡಿಕೆಯಲ್ಲಿ ಅನುಮತಿ ನೀಡುವ ಬಗ್ಗೆ ಮಾಡಿದ ಆರೋಪಗಳನ್ನು ಈ ಕೆಳಗಿನಂತೆ ಓದಲಾಗಿದೆ:

" ಆರೋಪಿಗಳು ಸರ್ಕಾರಿ ನೌಕರರಾಗಿರುವುದರಿಂದ, ಸಿಆರ್.ಪಿ.ಸಿ.ಯ 197 ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಿದಂತೆ ಆರೋಪಿಯು ಎಸಗಿದ ಅಪರಾಧಗಳ ಸಂಬಂಧದಲ್ಲಿ ದೂರನ್ನು ದಾಖಲಿಸಲು ಅನುಮತಿಯನ್ನು ಕೋರಿದಿನಾಂಕ: 7.5.2019 ರಂದು, ಮಾನ್ಯ ಮುಖ್ಯ ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರಿಗೆ ಮನವಿ ಪತ್ರವನ್ನು ಬರೆಯಲಾಗಿತ್ತು ಎಂದು ನಿವೇದಿಸಿಕೊಳ್ಳಲಾಗಿದೆ.ಮಾನ್ಯ ಪ್ರಾಧಿಕಾರವುದಿನಾಂಕ: 13.6.2019 ರ ಪತ್ರದ ಮೂಲಕ ವಿಷಯ ಕುರಿತು ವ್ಯವಹರಣೆ ನಡೆಸಲು ಅನುಮತಿಯನ್ನು ನೀಡಿರುತ್ತಾರೆ.ಸದರಿ ಮನವಿ ಮತ್ತು ನೀಡಲಾದ ಅನುಮತಿ ಪತ್ರದ ಪ್ರತಿಯನ್ನು ಇದರೊಂದಿಗೆ ಕ್ರಮವಾಗಿ ಅನುಬಂಧ- ಒ ಮತ್ತು ಪಿ ಎಂದು ಹಾಜರುಪಡಿಸಲಾಗಿದೆ. "

12. ದೂರಿನ X ನೇ ಕಂಡಿಕೆಯಲ್ಲಿರುವ ವ್ಯಾಜ್ಯ ಕಾರಣದ ಕಂಡಿಕೆಯಲ್ಲಿ, ಎರಡನೇ ಪ್ರತಿವಾದಿಗಳು ಇತರ ಆರೋಪಿಗಳ ಮನವಿಯಂತೆ, ದೂರುದಾರರನ್ನು ನ್ಯಾಯಿಕ ಅಭಿರಕ್ಷೆಗೆ ಕಳುಹಿಸಿದ್ದಾರೆ ಎಂದು ಮೊದಲನೇ ಪ್ರತಿವಾದಿಗಳು ಹೇಳಿದ್ದಾರೆ.ಎರಡನೇ ಪ್ರತಿವಾದಿಗಳು, ದೂರುದಾರರನ್ನು, ಎಂದರೆ ಇದರಲ್ಲಿನ ಮೊದಲನೇ ಪ್ರತಿವಾದಿಗಳನ್ನು ಬಿಡುಗಡೆ ಮಾಡಲು 9 ನೇ ಆರೋಪಿಯ ಮೂಲಕ ಹಣಕ್ಕೆ ಬೇಡಿಕೆ ಇಟ್ಟಿದ್ದರೆಂಬುದು ವಾದಿಸಿದ ಎರಡನೇ ವ್ಯಾಜ್ಯ ಕಾರಣವಾಗಿದೆ.

13. ದೂರಿನ VII ನೇ ಕಂಡಿಕೆಯಲ್ಲಿ, 1 ನೇ ಆರೋಪಿಯು, ಎರಡು ಲಕ್ಷ ರೂಪಾಯಿಗಳ ಮೊತ್ತದ ಬೇಡಿಕೆ ಇಟ್ಟಿದ್ದ ಅಹನ ಸೌಹಾರ್ದ ಪತ್ತಿನ ಸಹಕಾರ ಸಂಘ ನಿಯಮಿತದ ಆಗಿನ ವ್ಯವಸ್ಥಾಪಕರಾಗಿದ್ದನ್ನು ಮೊದಲನೇ ಪ್ರತಿವಾದಿಗಳು ವಿವರಿಸಿದ್ದಾರೆ.3 ನೇ ಆರೋಪಿಯು ವ್ಯವಸ್ಥಾಪಕರಾಗಿದ್ದರಿಂದಾಗಿ, ಇದು ಖಂಡಿತವಾಗಿಯು ತಪ್ಪು ಮತ್ತು ದೂರಿನಲ್ಲಿ ತೋರಿಸಿರುವ ಮೊದಲನೇ ಆರೋಪಿಯು ಇದರಲ್ಲಿನ ಎರಡನೇ ಪ್ರತಿವಾದಿಗಳಾಗಿರುವವರು.ಹಣದ ಬೇಡಿಕೆ ಬಗ್ಗೆ ವ್ಯಾಜ್ಯ ಕಾರಣಕ್ಕೆ ಸಂಬಂಧಿಸಿದ ದೂರಿನ X ನೇ ಕಂಡಿಕೆಯಲ್ಲಿನ ಆರೋಪವು ವಾಸ್ತವವಾಗಿ 9 ನೇ ಆರೋಪಿಯ ವಿರುದ್ಧವಾಗಿದೆ.ಮೊದಲನೇ ಪ್ರತಿವಾದಿಯ ಬಿಡುಗಡೆಗಾಗಿ ಹಣಕ್ಕೆ ಬೇಡಿಕೆ ಇಡಲಾಗಿತ್ತು ಎಂಬುದು ನೇರ ಆರೋಪವಾಗಿದೆ.ಆದುದರಿಂದ, ಮೊದಲನೇ ಪ್ರತಿವಾದಿಯನ್ನು ದಸ್ತಗಿರಿ ಮಾಡಿ, ಎರಡನೇ ಪ್ರತಿವಾದಿಯು ಮುಂದೆ ಹಾಜರುಪಡಿಸಿದ್ದಾಗ, 3 ರಿಂದ 9 ನೇ ಆರೋಪಿಗಳ ಸೂಚನೆ ಮೇರೆಗೆ, ಎರಡನೇ ಪ್ರತಿವಾದಿಗಳು ಮೊದಲನೇ ಪ್ರತಿವಾದಿಗಳನ್ನು ನ್ಯಾಯಿಕ ಅಭಿರಕ್ಷೆಗೆ ಕಳುಹಿಸಿ ಆದೇಶ ಹೊರಡಿಸಿದ್ದರು ಎಂಬುದು ದೂರಿನಲ್ಲಿ ಮೊದಲನೇ ಪ್ರತಿವಾದಿಯು ಎರಡನೇ ಪ್ರತಿವಾದಿ-ನ್ಯಾಯಿಕ ಅಧಿಕಾರಿಯವರ ವಿರುದ್ಧ ಆರೋಪ ಮಾಡಿದ್ದಾರೆ ಎಂಬುದು ಇದರ ತಾತ್ಪರ್ಯವಾಗಿದೆ.ಮೊದಲನೇ ಪ್ರತಿವಾದಿಯನ್ನು ಎರಡನೇ ಪ್ರತಿವಾದಿಯವರ ಮುಂದೆ ಹಾಜರುಪಡಿಸಿದಾಗ, ಎರಡನೇ ಪ್ರತಿವಾದಿಗಳು ಹೇಳಲಾಗಿರುವ ಕೆಲವು ಮಾತುಗಳನ್ನು ಅವರ ಮೇಲೆ ಆರೋಪಿಸಲಾಗಿದೆ.ಆದ್ದರಿಂದ, ಎರಡನೇ ಪ್ರತಿವಾದಿಗಳ ವಿರುದ್ಧ ಒಂದನೇ ಪ್ರತಿವಾದಿಗಳು ದಾಖಲಿಸಿದ ದೂರಿನಲ್ಲಿ ಮಾಡಲಾಗಿದ್ದ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾಗಿ ಅವರ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಉದ್ದೇಶಪೂರ್ವಕವಾಗಿ

ಕಾರ್ಯನಿರ್ವಹಿಸುವಾಗ, ಅವರು ಮಾತನಾಡಿದರೆಂದು ಆರೋಪಿಸಲಾಗಿರುವ ಆರೋಪಗಳು, ಸ್ಪಷ್ಟವಾಗಿ ಮೊದಲನೇ ಪ್ರತಿವಾದಿಗಳನ್ನು ನ್ಯಾಯಿಕ ಅಭಿರಕ್ಷೆಗೆ ಕಳುಹಿಸಿ, ಎರಡನೇ ಪ್ರತಿವಾದಿಗಳು ಆದೇಶ ಹೊರಡಿಸಿರುವ ರೀತಿಯನ್ನು ಕುರಿತಾಗಿವೆ.ಈ ಸಂದರ್ಭದ ಹಿನ್ನೆಲೆಯಲ್ಲಿ, ಈಗ ನಾವು, ಅಭಿಯೋಜನೆಯ ವಿರುದ್ಧ ನ್ಯಾಯಿಕ ಅಧಿಕಾರಿಗಳಿಗೆ ಕಾನೂನಿನ ಮೂಲಕ ನೀಡಲಾದ ಯಾವುದೇ ಸಂರಕ್ಷಣೆ ಇದ್ದರೆ, ಅದನ್ನು ಪರಿಗಣಿಸಲೇಬೇಕಾಗುತ್ತದೆ.

14. ವಿಷಯ ಕುರಿತ ಮೊದಲ ಅಧಿನಿಯಮಿತಿ ಎಂದರೆ, ನ್ಯಾಯಿಕ ಅಧಿಕಾರಿಗಳ ಸಂರಕ್ಷಣಾ ಅಧಿನಿಯಮ, 1850 (ಸಂಕ್ಷಿಪ್ತವಾಗಿ ' 1850 ರ ಸದರಿ ಅಧಿನಿಯಮ).ಸದರಿ ಅಧಿನಿಯಮದ 1 ನೇ ಪ್ರಕರಣವನ್ನು ಹೀಗೆ ಓದಲಾಗಿದೆ:

"1. ಸದ್ಭಾವನೆಯಿಂದ ಮಾಡಿದ ಅಧಿಕೃತ ಕಾರಗಳಿಗಾಗಿ, ನ್ಯಾಯಿಕವಾಗಿ ಕಾರನಿರ್ವಹಿಸುವ ಅಧಿಕಾರಿಗಳ ಮತ್ತು ವಾರಂಟುಗಳನ್ನು ಹಾಗೂ ಆದೇಶಗಳನ್ನು ಜಾರಿಗೊಳಿಸುವ ಅಧಿಕಾರಿಗಳ ದಾವೆಗೆ ಹೊಣೆಗಾರಿಕೆ ಇಲ್ಲದಿರುವುದು.ಯಾರೇ ನ್ಯಾಯಾಧೀಶ, ದಂಡಾಧಿಕಾರಿ, ಶಾಂತಿಪಾಲಕ ನ್ಯಾಯಮೂರ್ತಿ, ಜಿಲ್ಲಾಧಿಕಾರಿ ಅಥವಾ ನ್ಯಾಯಿಕವಾಗಿ ಕಾರನಿರ್ವಹಿಸುವ ಇತರ ವ್ಯಕ್ತಿಯು, ತನ್ನ ಅಧಿಕಾರ ವ್ಯಾಪ್ತಿಯ ಮಿತಿಯಲ್ಲಿ ಇರಲಿ ಅಥವಾ ಇಲ್ಲದಿರಲಿ, ತನ್ನ ನ್ಯಾಯಿಕ ಕರ್ತವ್ಯದ ನಿರ್ವಹಣೆಯಲ್ಲಿ ಆತನು ಮಾಡಿದ ಅಥವಾ ಮಾಡಬೇಕೆಂದು ಆದೇಶಿಸಿದ ಯಾವುದೇ ಕಾರ್ಯಕ್ಕಾಗಿ, ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ದಾವೆಗೆ ಒಳಗಾಗತಕ್ಕದಲ್ಲ; ಪರಂತು, ಸದ್ಭಾವನೆಯಿಂದ ಆ ಸಮಯದಲ್ಲಿ, ಆಪಾದಿಸಲಾಗಿರುವ ಕಾರ್ಯವನ್ನು ಮಾಡಲು ಅಥವಾ ಆದೇಶಿಸಲು ಸ್ವತಃ ಅಧಿಕಾರ ವ್ಯಾಪ್ತಿ ಹೊಂದಿರುವುದಾಗಿ ನಂಬಲಾಗಿರುವ; ಮತ್ತು ಅಂಥ ಯಾರೇ ನ್ಯಾಯಾಧೀಶನ, ದಂಡಾಧಿಕಾರಿಯ, ಶಾಂತಿಪಾಲಕ ನ್ಯಾಯಮೂರ್ತಿಯ, ಜಿಲ್ಲಾಧಿಕಾರಿಯ ಅಥವಾ ನ್ಯಾಯಿಕವಾಗಿ ಕಾರನಿರ್ವಹಿಸುತ್ತಿರುವ ಇತರ ವ್ಯಕ್ತಿಯ ಕಾನೂನುಬದ್ಧ ವಾರಂಟುಗಳನ್ನು ಅಥವಾ ಆದೇಶಗಳನ್ನು ಜಾರಿ ಮಾಡಲು ಬದ್ಧನಾಗಿರುವ ಯಾವುದೇ ನ್ಯಾಯಾಲಯದ ಯಾರೇ ಅಧಿಕಾರಿ ಅಥವಾ ಇತರ ವ್ಯಕ್ತಿಯು, ಅದನ್ನು ನೀಡುವ ವ್ಯಕ್ತಿಯ ಅಧಿ ಕಾರವ್ಯಾಪ್ತಿಯೊಳಗಿದ್ದರೆ, ಜಾರಿ ಮಾಡಲು ಆತನು ಬದ್ಧನಾಗಿರುವ ಯಾವುದೇ ವಾರಂಟಿನ ಅಥವಾ ಆದೇಶದ ಜಾರಿಗೆ, ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ದಾವೆಗೆ ಒಳಗಾಗತಕ್ಕದ್ದಲ್ಲ.

ಸದರಿ ಪ್ರಕರಣದ ಸರಳ ಓದುವಿಕೆಯಿಂದ, ಅದು ಸೀಮಿತ ರೀತಿಯಲ್ಲಿ ನ್ಯಾಯಿಕ ಅಧಿಕಾರಿಗಳಿಗೆ ಸಂರಕ್ಷಣೆಯನ್ನು ಒದಗಿಸುತ್ತದೆ.ಅದು ನ್ಯಾಯಿಕ ಅಧಿಕಾರಿಯು ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ದಾವೆಗೆ ಒಳಗಾಗುವುದರಿಂದ ತಡೆಯುತ್ತದೆ.ಅಭಿಯೋಜನೆಯ ವಿರುದ್ಧ ನ್ಯಾಯಿಕ ಅಧಿಕಾರಿಗಳನ್ನು ಸಂರಕ್ಷಿಸುವುದಕ್ಕೆ ಸದರಿ ಉಪಬಂಧದ ಅಡಿಯಲ್ಲಿ ಅವರಿಗೆ ಯಾವುದೇ ಸಂರಕ್ಷಣೆ ನೀಡಲಾಗಿರುವುದಿಲ್ಲ.

15. ಐ.ಪಿ.ಸಿ.ಯಲ್ಲಿರುವ ಸಾಮಾನ್ಯ ವಿನಾಯಿತಿಗಳು ಶೀರ್ಷಿಕೆ ಅಡಿಯಲ್ಲಿನ ಅಧ್ಯಾಯ-IV ರ ಅಡಿಯಲ್ಲಿ ಎರಡನೇ ಸಂರಕ್ಷಣೆ ಇದೆ. ಅದು 77 ನೇ ಪ್ರಕರಣದ ರೂಪದಲ್ಲಿದ್ದು, ಹೀಗೆ ಓದಲಾಗಿದೆ:

"77. ನ್ಯಾಯಿಕವಾಗಿ ಕಾರನಿರ್ವಹಿಸುತ್ತಿರುವಾಗ ನ್ಯಾಯಾಧೀಶನ ಕೃತ್ಯ.-ಕಾನೂನಿನ ಮೂಲಕ ನ್ಯಾಯಾಧೀಶನಿಗೆ ನೀಡಲಾಗಿರುವ ಅಥವಾ ನೀಡಲಾಗಿದೆಯೆಂದು ಆತನು ನಂಬುವ ಯಾವುದೇ

ಅಧಿಕಾರವನ್ನು ಸದ್ಭಾವನೆಯಿಂದ ಚಲಾಯಿಸಿ ನ್ಯಾಯಿಕವಾಗಿ ಆತನು ಕಾರನಿರ್ವಹಿಸುತ್ತಿರುವಾಗ ಮಾಡಿದ ಯಾವುದೇ ಕೃತ್ಯವು ಅಪರಾಧವಾಗುವುದಿಲ್ಲ."

ಇದು, ಐ.ಪಿ.ಸಿ. ಅಡಿಯಲ್ಲಿ ದಂಡನೀಯ ಅಪರಾಧಗಳಿಂದ ನ್ಯಾಯಿಕ ಅಧಿಕಾರಿಯನ್ನು ಸಂರಕ್ಷಿಸುತ್ತದೆ; ಪರಂತು, ಕಾನೂನಿನ ಮೂಲಕ ಆತನಿಗೆ ನೀಡಲಾಗಿರುವ ಅಥವಾ ನೀಡಲಾಗಿದೆಯೆಂದು ಆತನು ನಂಬುವ ಯಾವುದೇ ಅಧಿಕಾರವನ್ನು ಸದ್ಭಾವನೆಯಿಂದ ಚಲಾಯಿಸಿ ನ್ಯಾಯಿಕವಾಗಿ ಆತನು ಕಾರನಿರ್ವಹಿಸುತ್ತಿರುವಾಗ ಮಾಡಿದ ಕೃತ್ಯ ಅಥವಾ ಲೋಪವಾಗಿರತಕ್ಕದ್ದು.

16. 197 ನೇ ಪ್ರಕರಣವು ಮೂರನೇ ಉಪಬಂಧವಾಗಿದ್ದು, ಅದು ನ್ಯಾಯಿಕ ಅಧಿಕಾರಿಯು, ತನ್ನ ಅಧಿಕೃತ ಕರ್ತವ್ಯವನ್ನು ನಿರ್ವಹಿಸುವಲ್ಲಿ ಕಾರ್ ನಿರ್ವಹಿಸುತ್ತಿರುವಾಗ ಅಥವಾ ನಿರ್ವಹಿಸುತ್ತಿರುವನೆಂದು ತಾತ್ಪರ್ಯವಾಗುವಾಗ, ಆತನು ಎಸಗಿರುವನೆಂದು ಆರೋಪಿಸಲಾಗುವ ಯಾವುದೇ ಅಪರಾಧದ ಆರೋಪಿಯಾಗಿದ್ದಾಗ, ಅದರಲ್ಲಿ ಉಪಬಂಧಿಸಿದಂತೆ ಪೂರ್ವ-ಮಂಜೂರಾತಿ ಪಡೆಯದ ಹೊರತು, ಯಾವುದೇ ನ್ಯಾಯಾಲಯವು ಅಂಥ ಅಪರಾಧದ ಸಂಜ್ಞೆಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

17. ಅತ್ಯಂತ ಸುಸಂಗತವಾಗಿರುವ ಮತ್ತೊಂದು ಅಧಿನಿಯಮಿತಿ ಇದೆ. ಅದು ನ್ಯಾಯಾಧೀಶರ (ಸಂರಕ್ಷಣಾ) ಅಧಿನಿಯಮ, 1985 (ಸಂಕ್ಷಿಪ್ತವಾಗಿ "1985 ರ ಸದರಿ ಅಧಿನಿಯಮ), 1985 ರ ಸದರಿ ಅಧಿನಿಯಮದ ಪ್ರಸ್ತಾವನೆಯಲ್ಲಿ ಹೀಗೆ ಹೇಳಲಾಗಿದೆ:

"ನ್ಯಾಯಾಧೀಶರಿಗೆ ಮತ್ತು ನ್ಯಾಯಿಕವಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಕಾರ್ಯನಿರ್ವಹಿಸುವ ಇತರರಿಗೆ ಅಧಿನಿಯಮವು ಹೆಚ್ಚಿನ ಸಂರಕ್ಷಣೆಯನ್ನು ಒದಗಿಸುತ್ತದೆ. "

1985 ರ ಸದರಿ ಅಧಿನಿಯಮದ 2 ರಿಂದ 4 ನೇ ಪ್ರಕರಣಗಳನ್ನು ಈ ಮುಂದಿನಂತೆ ಓದಲಾಗಿದೆ:

"2. ಪರಿಭಾಷೆ.- ಈ ಅಧಿನಿಯಮದಲ್ಲಿ, " ನ್ಯಾಯಾಧೀಶ " ಎಂದರೆ, ನ್ಯಾಯಾಧೀಶನಾಗಿ ಅಧಿಕೃತವಾಗಿ ಗೊತ್ತುಪಡಿಸಲಾಗಿರುವ ಪ್ರತಿಯೊಬ್ಬ ವ್ಯಕ್ತಿಯಷ್ಟೇ ಅಲ್ಲದೆ,

(ಎ) ಯಾವುದೇ ಕಾನೂನು ವ್ಯವಹರಣೆಯಲ್ಲಿ ಅಂತಿಮ ತೀರ್ಪನ್ನು ಅಥವಾ ಅದರ ವಿರುದ್ಧ ಅಪೀಲು ಸಲ್ಲಿಸದಿದ್ದರೆ ಅಂತಿಮವಾಗುವ ಅಥವಾ ಕೆಲವು ಇತರ ಪ್ರಾಧಿಕಾರಿಗಳು ಅಂತಿಮವೆಂದು ಸ್ಥಿರೀಕರಿಸಿದರೆ ಅಂತಿಮವಾಗುವ ತೀರ್ಪನ್ನು ನೀಡಲು ಕಾನೂನಿನ ಮೂಲಕ ಅಧಿಕೃತರಾಗಿರುವ;

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಿದಂತೆ ಅಂಥ ತೀರ್ಪನ್ನು ನೀಡಲು ಕಾನೂನಿನ ಮೂಲಕ ಅಧಿಕೃತರಾದ ವ್ಯಕ್ತಿಗಳ ನಿಕಾಯವಾಗಿರುವ ವ್ಯಕ್ತಿಗಳ ನಿಕಾಯದಲ್ಲಿ ಒಬ್ಬನಾಗಿರುವ, ಪ್ರತಿಯೊಬ್ಬ ವ್ಯಕ್ತಿಯನ್ನು ಸಹ ಒಳಗೊಳ್ಳುತ್ತದೆ.

3. ನ್ಯಾಯಾಧೀಶರಿಗೆ ಹೆಚ್ಚುವರಿ ಸಂರಕ್ಷಣೆ.- ( 1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ ಮತ್ತು ( 2) ನೇ ಉಪ-ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಯಾವುದೇ ನ್ಯಾಯಾಲಯವು, ಯಾರೇ ವ್ಯಕ್ತಿಯ ಅಧಿಕೃತ ಅಥವಾ ನ್ಯಾಯಿಕ ಕರ್ತವ್ಯ ಅಥವಾ ಪ್ರಕಾರ್ಯದ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸಿದಾಗ ಅಥವಾ ಕಾರ್ಯನಿರ್ವಹಿಸುವ ಅಥವಾ ಕಾರ್ಯನಿರ್ವಹಿಸಿರುವನೆಂದು ತಾತ್ಪರ್ಯವಾಗುವ ಅವಧಿಯಲ್ಲಿ, ಆತನು ಎಸಗಿದ ಯಾವುದೇ ಕೃತ್ಯ, ಮಾಡಿದ

ಯಾವುದೇ ಕೆಲಸ ಅಥವಾ ಆಡಿದ ಯಾವುದೇ ಮಾತಿಗಾಗಿ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದಂಥ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಯನ್ನು ಪುರಸ್ಕರಿಸತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ.

(2) (1) ನೇ ಉಪ-ಪ್ರಕರಣದಲ್ಲಿರುವುದು ಯಾವುದೂ, ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ಯಾರೇ ವ್ಯಕ್ತಿಯ ವಿರುದ್ಧ ಅಂಥ ಕ್ರಮವನ್ನು (ಸಿವಿಲ್, ಕ್ರಿಮಿನಲ್ ಅಥವಾ ಇಲಾಖಾ ವ್ಯವಹರಣೆಗಳ ಅಥವಾ ಅನ್ಯಥಾ ರೀತಿಯಲ್ಲಿರಲಿ) ತೆಗೆದುಕೊಳ್ಳಲು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಕೇಂದ್ರ ಸರ್ಕಾರದ ಅಥವಾ ಒಂದು ರಾಜ್ಯ ಸರ್ಕಾರದ ಅಥವಾ ಸರ್ವೋಚ್ಚ ನ್ಯಾಯಾಲಯದ ಅಥವಾ ಯಾವುದೇ ಉಚ್ಚ ನ್ಯಾಯಾಲಯದ ಅಥವಾ ಯಾವುದೇ ಇತರ ಪ್ರಾಧಿಕಾರದ ಅಧಿಕಾರವನ್ನು ಯಾವುದೇ ರೀತಿಯಲ್ಲೂ ತಡೆಯತಕ್ಕದ್ದಲ್ಲ ಅಥವಾ ಬಾಧಿಸತಕ್ಕದ್ದಲ್ಲ.

4. ಉ ಳ ಸುವಿಕೆ.- ಈ ಅಧಿನಿಯಮದ ಉಪಬಂಧವು, ನ್ಯಾಯಾಧೀಶರ ಸಂರಕ್ಷಣೆಗೆ ಉಪಬಂಧ ಕಲ್ಪಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಹೆಚ್ಚುವರಿ ಯಾಗಿರತಕ್ಕದ್ದು ಮತ್ತು ಅದನ್ನು ಅಲ್ಪಕರಿಸತಕ್ಕದ್ದಲ್ಲ.(ಗೆರೆ ಹಾಕಿದ್ದಕ್ಕೆ ಒತ್ತು ನೀಡಲಾಗಿದೆ)

18. 1985 ರ ಸದರಿ ಅಧಿನಿಯಮದ ಪ್ರಸ್ತಾವನೆಯಲ್ಲಿ, ನ್ಯಾಯಾಧೀಶರ ಮತ್ತು ನ್ಯಾಯಿಕವಾಗಿ ಕಾರನಿರ್ವಹಿಸುವ ಇತರರಿಗೆ 1985 ರ ಸದರಿ ಅಧಿನಿಯಮವು ಹೆಚ್ಚುವರಿ ಸಂರಕ್ಷಣೆಯನ್ನು ಒದಗಿಸುವುದೆಂದು ಹೇಳಲಾಗಿದೆ.4 ನೇ ಪ್ರಕರಣವು, 1985 ರ ಸದರಿ ಅಧಿನಿಯಮದ ಉಪಬಂಧಗಳು, ನ್ಯಾಯಾಧೀಶರ ಸಂರಕ್ಷಣೆಗೆ ಉಪಬಂಧ ಕಲ್ಪಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಹೆಚ್ಚುವರಿ ಉಪಬಂಧಗಳಾಗಿವೆ ಮತ್ತು ಅದನ್ನು ಅಕರಿಸುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ.ಹಾಗಾಗಿ, 1985 ರ ಸದರಿ ಅಧಿನಿಯಮದ ಅಡಿಯಲ್ಲಿ ನೀಡಲಾದ ಸಂರಕ್ಷಣೆಯು, ಐ.ಪಿ.ಸಿ.ಯ 77 ನೇ ಪ್ರಕರಣದ ಮತ್ತು ಸಿಆರ್.ಪಿ.ಸಿ.ಯ 197 ನೇ ಪ್ರಕರಣದ ಅಡಿಯಲ್ಲಿ ನೀಡಲಾದ ಹೆಚ್ಚಿನ ಸಂರಕ್ಷಣೆಯಾಗಿದೆ.3 ನೇ ಪ್ರಕರಣದ 1 ನೇ ಉಪ-ಪ್ರಕರಣವು, ಇತರ ಕಾನೂನುಗಳ ಉಪಬಂಧಗಳನ್ನು ಅತಿಕ್ರಮಿಸುತ್ತದೆ ಎಂದು ತೋರಿಸುವ ಏನೇ ಇದ್ದರೂ ಎಂಬ ಖಂಡದೊಂದಿಗೆ 3 ನೇ ಪ್ರಕರಣದ 1 ನೇ ಉಪ-ಪ್ರಕರಣವು ಪ್ರಾರಂಭವಾಗುತ್ತದೆ ಎಂಬುದನ್ನು ಗಮನಿಸುವುದು ಮುಖ್ಯವಾಗುತ್ತದೆ.

19. ಸದರಿ ಅಧಿನಿಯಮದ 3 ನೇ ಪ್ರಕರಣದ 1 ನೇ ಉಪ-ಪ್ರಕರಣವು, ನ್ಯಾಯಾಧೀಶನಾಗಿರುವ ಅಥವಾ ಆಗಿದ್ದಂಥ ಯಾರೇ ವ್ಯಕ್ತಿಯು, ನ್ಯಾಯಿಕ ಪಕಾರ್ಯದ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸಿದಾಗ ಅಥವಾ ಕಾರ್ಯನಿರ್ವಹಿಸುವ ಅವಧಿಯಲ್ಲಿಅಥವಾ ಕಾರ್ಯನಿರ್ವಹಿಸಿರುವುದಾಗಿ ತಾತ್ಪರ್ಯವಾದಾಗ, ಆತನು ಎಸಗಿದ ಯಾವುದೇ ಕೃತ್ಯಕ್ಕಾಗಿ ಅಥವಾ ಮಾಡಿದ ಕೆಲಸಕ್ಕಾಗಿ ಅಥವಾ ಆಡಿದ ಮಾತಿಗಾಗಿ, ಆತನ ವಿರುದ್ಧ ಯಾವುದೇ ಕ್ರಿಮಿನಲ್ ಅಥವಾ ಸಿವಿಲ್ ವ್ಯವಹರಣೆಗಳನ್ನು ಪುರಸ್ಕರಿಸುವುದರ ಅಥವಾ ಮುಂದುವರಿಸುವುದರ ಮೇಲೆ ನಿಷೇಧವನ್ನು ವಿಧಿಸುತ್ತದೆ.1850 ರ ಅಧಿನಿಯಮದ 3 ನೇ ಪ್ರಕರಣದ 1 ನೇ ಉಪ-ಪ್ರಕರಣವು, ಒಬ್ಬ ನ್ಯಾಯಿಕ ಅಧಿಕಾರಿಯ ನ್ಯಾಯಿಕ ಕರ್ತವ್ಯದ ನಿರ್ವಹಣೆಯಲ್ಲಿ ಆತನು ಮಾಡಿದ ಯಾವುದೇ ಕಾರ್ಯಕ್ಕಾಗಿ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ದಾವೆಗೆ ಒಳಪಡುವುದರಿಂದ ಆತನನ್ನು ಸಂರಕ್ಷಿಸುತ್ತದೆ ಎಂಬುದನ್ನು ಇಲ್ಲಿ ಗಮನಿಸಲೇಬೇಕಾಗಿದೆ.ಪರಂತು, ದೋಷಾರೋಪಣೆ ಮಾಡಿದ ಕಾವ್ಯವನ್ನು ಮಾಡಲು ಅಥವಾ ಆದೇಶಿಸಲು ಆ ನ್ಯಾಯಿಕ ಅಧಿಕಾರಿಯು ಅಧಿಕಾರ ವ್ಯಾಪ್ತಿ ಹೊಂದಿರುವುದಾಗಿ ಸ್ವತಃ

ಸದ್ಭಾವನೆಯಿಂದ ನಂಬಿರತಕ್ಕದ್ದು.ಐ.ಪಿ.ಸಿ.ಯ 7 ನೇ ಪ್ರಕರಣವು ಸಹ ಸದುದ್ದೇಶದಿಂದ ಕಾರ್ಯನಿರ್ವಹಿಸುವ ಷರತ್ತನ್ನು ಅಳವಡಿಸಿದೆ.1985 ರ ಸದರಿ ಅಧಿನಿಯಮದ 3 ನೇ ಪ್ರಕರಣವು, ಸದ್ಭಾವನೆಯಿಂದ ಕಾರ್ಯನಿರ್ವಹಿಸುವ ನ್ಯಾಯಾಧೀಶನ ಅಥವಾ ಆತನು ಮಾಡಿರುವ ಕಾರ್ಯಕ್ಕೆ ಅಧಿಕಾರವ್ಯಾಪ್ತಿಯನ್ನು ಆತನು ಹೊಂದಿದ್ದನು ಎಂಬುದನ್ನು ನಂಬುವ ಅಗತ್ಯತೆಯನ್ನು ಅಳವಡಿಸಿರುವುದಿಲ್ಲ.ಒಬ್ಬ ನ್ಯಾಯಿಕ ಅಧಿಕಾರಿಯು, ತನ್ನ ಅಧಿಕೃತ ಕರ್ತವ್ಯದ ಅಥವಾ ಪ್ರಕಾರ್ಯದ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸುವ ಅವಧಿಯಲ್ಲಿ ಅಥವಾ ಕಾರ್ಯವೆಂಬ ತಾತ್ಪರ್ಯದಲ್ಲಿ ಆತನು ಎಸಗಿದ ಕೃತ್ಯ ಅಥವಾ ಮಾಡಿದ ಕೆಲಸ ಅಥವಾ ಆಡಿದ ಮಾತಿಗಾಗಿ, ಯಾವುದೇ ನ್ಯಾಯಾಲಯವು, ಆ ನ್ಯಾಯಿಕ ಅಧಿಕಾರಿಯ ವಿರುದ್ಧ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗಳನ್ನು ಪುರಸ್ಕರಿಸುವಂತಿಲ್ಲ ಅಥವಾ ಮುಂದುವರಿಸುವಂತಿಲ್ಲ.

20. ಹಾಗಾಗಿ, 1985 ರ ಸದರಿ ಅಧಿನಿಯಮದ 3 ನೇ ಪ್ರಕರಣದ 1 ನೇ ಉಪ-ಪ್ರಕರಣದ ಸಂರಕ್ಷಣೆಯನ್ನು ಅನ್ವಯಿಸಲು, ನ್ಯಾಯಿಕ ಅಧಿಕಾರಿಯ ಕೃತ್ಯ, ಕೆಲಸ ಅಥವಾ ಮಾತುಗಳನ್ನು ಸದ್ಭಾವನೆಯಿಂದ ಮಾಡಬೇಕಾದ ಅಥವಾ ಹೇಳಬೇಕಾದ ಅಗತ್ಯವಿಲ್ಲ.ಇದು, ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳೆರಡರ ವಿರುದ್ಧ ನ್ಯಾಯಿಕ ಅಧಿಕಾರಿಗಳನ್ನು ಸಂರಕ್ಷಿಸಲು ಅವರಿಗೆ ನೀಡಲಾದ ಹೆಚ್ಚುವರಿ ಸಂರಕ್ಷಣೆಯಾಗಿದೆ.ಸಹಜವಾಗಿಯೇ, ಮೊದಲಿನ ಶಾಸನಗಳು ನ್ಯಾಯಾಧೀಶರಿಗೆ ನೀಡಿದ ಸಂರಕ್ಷಣೆಯು ಸಮರ್ಪಕವಾಗಿಲ್ಲದ್ದರಿಂದ, 1985 ರ ಸದರಿ ಅಧಿನಿಯಮವನ್ನು 6 ನೇ ಸೆಪ್ಟೆಂಬರ್, 1985 ರಿಂದ ಜಾರಿಗೆ ಬರುವಂತೆ ಅಧಿನಿಯಮಿತ ಗೊಳಿಸಲಾಗಿತ್ತೆಂಬುದು ಶಾಸನದ ವಿವೇಚನಾನುಸಾರ ಅಭಿಪ್ರಾಯಪಡಲಾಗಿತ್ತು.

21. 1985 ರ ಸದರಿ ಅಧಿನಿಯಮದಲ್ಲಿ ' ನ್ಯಾಯಾಧೀಶ ' ಪದದ ಪರಿಭಾಷೆಯಿಂದ ತಿಳಿಯಬಹುದಾದಂತೆ, ಸುಸಂಗತ ಸಮಯದಲ್ಲಿ ಎರಡನೇ ಪ್ರತಿವಾದಿಯು, ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾಗಿದ್ದರಿಂದ ನ್ಯಾಯಾಧೀಶರಾಗಿದ್ದರು.ಎರಡನೆಯದಾಗಿ, ಮೊದಲನೇ ಪ್ರತಿವಾದಿಯು ಅವರ ವಿರುದ್ಧ ಮಾಡಿದ ಎಲ್ಲಾ ಆಪಾದನೆಗಳು, ಅವರ ಅಧಿಕೃತ ಅಥವಾ ನ್ಯಾಯಿಕ ಕರ್ತವ್ಯಗಳ ನಿರ್ವಹಣೆಯಲ್ಲಿ ಕಾರನಿರ್ವಹಿಸುವ ಅಥವಾ ಕಾರ್ಯನಿರ್ವಹಿಸಿದರೆಂದು ತಾತ್ಪರ್ಯವಾಗುವ ಅವಧಿಯಲ್ಲಿ ಸದರಿ ನ್ಯಾಯಿಕ ಅಧಿಕಾರಿಯು ಮಾಡಿದ ಕೃತ್ಯಗಳನ್ನು ಕುರಿತಾಗಿವೆ.ತನ್ನ ದೂರಿನಲ್ಲಿ ಎರಡನೇ ಪ್ರತಿವಾದಿಯು, ಮೊದಲನೇ ಪ್ರತಿವಾದಿಗೆ ಆರೋಪಿಸಿರುವ ಆಡಿದ ಮಾತುಗಳು ಸಹ ನ್ಯಾಯಿಕ ಅಧಿಕಾರಿಯಾಗಿ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಕಾರನಿರ್ವಹಿಸಿದ ಅಥವಾ ಕಾರ್ಯನಿರ್ವಹಿಸಿದರೆಂದು ತಾತ್ಪರ್ಯವಾಗುವ ಅವಧಿಯಲ್ಲಿ ಮಾತನಾಡಿದಂಥವುಗಳಾಗಿವೆ.ಆದುದರಿಂದ, 1985 ರ ಸದರಿ ಅಧಿನಿಯಮದ 3 ನೇ ಪ್ರಕರಣದ ( 1) ನೇ ಉಪ-ಪ್ರಕರಣವು ಸ್ಪಷ್ಟವಾಗಿ ಅನ್ವಯವಾಗುತ್ತದೆ ಮತ್ತು ಹಾಗಾಗಿ, ಮಾನ್ಯ ನ್ಯಾಯಿಕ ದಂಡಾಧಿಕಾರಿಯು ಎರಡನೇ ಪ್ರತಿವಾದಿಯವರ ವಿರುದ್ಧ ಮೊದಲನೇ ಪ್ರತಿವಾದಿಯು ದಾಖಲಿಸಿದ ದೂರನ್ನು ಪುರಸ್ಕರಿಸಬೇಕಾಗಿರಲಿಲ್ಲ.ಎರಡನೇ ಪ್ರತಿವಾದಿಯ ವಿರುದ್ಧ ದೂರನ್ನು ಮುಂದುವರಿಸಲಾಗುವುದಿಲ್ಲ.

22. ಡಾ. ವೈ. ಭಾಸ್ಕರ್ ರಾವ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಈ ನ್ಯಾಯಾಲಯದ ನಿರ್ಣಯವನ್ನು ನಾವು ಅವಲೋಕಿಸಿದ್ದೇವೆ.ಸದರಿ ಮೊಕದ್ದಮೆಯಲ್ಲಿನ ಅರ್ಜಿದಾರರು ಕರ್ನಾಟಕ ರಾಜ್ಯದ ಲೋಕಾಯುಕ್ತರಾಗಿದ್ದು, ಅವರ ವಿರುದ್ಧ ಭ್ರಷ್ಟಾಚಾರ ತಡೆ ಅಧಿನಿಯಮ, 1988 ರ ಮತ್ತು ಐ.ಪಿ.ಸಿ.ಯ ವಿವಿಧ ಪ್ರಕರಣಗಳ ಉಪಬಂಧಗಳ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಲಾಗಿತ್ತು.ಲೋಕಾಯುಕ್ತರಿಗೆ 1985 ರ ಸದರಿ ಅಧಿನಿಯಮದ 3 ನೇ ಪ್ರಕರಣದ ( 1) ನೇ ಉಪ-

ಪ್ರಕರಣದ ಸಂರಕ್ಷಣೆಯ ಲಭ್ಯತೆಯ ಆಧಾರದ ಮೇಲೆ ನಿರ್ದಿಷ್ಟವಾಗಿ ಪ್ರಶ್ನೆ ಸಂಖ್ಯೆ.3 ನ್ನು ರೂಪಿಸಲಾಗಿತ್ತು.1985 ರ ಸದರಿ ಅಧಿನಿಯಮದ ಸಂರಕ್ಷಣೆಯ ಬಗ್ಗೆ ಸಿಂಧುವಾದ ಮಂಜೂರಾತಿಯ ಅಸ್ತಿತ್ವಕ್ಕೆ ಸಂಬಂಧಿಸಿದ ವಿವಾದಕ್ಕೆ ಉತ್ತರಿಸಿದ್ದಷ್ಟೇ ಅಲ್ಲದೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಅಡಿಯಲ್ಲಿ, ಲೋಕಾಯುಕ್ತರು ಯಾವುದೇ ತೀರ್ಪುಗಳನ್ನು ನೀಡುವಂತಿಲ್ಲ ಮತ್ತು ಅವರು ದಾವೆಯನ್ನು ಕುರಿತು ನಿರ್ಧರಿಸುವ ಯಾವುದೇ ಸಂದರ್ಭವನ್ನು ಹೊಂದಿರಲಿಲ್ಲವೆಂದು ನಿರ್ದಿಷ್ಟವಾಗಿ ನಿರ್ಣಯಿಸಲಾಗಿತ್ತು.ಆ ಕಾರಣಕ್ಕಾಗಿ, ಆ ಪ್ರಶ್ನೆಗೆ ಅರ್ಜಿದಾರರ ವಿರುದ್ಧ ಉತ್ತರಿಸಲಾಗಿತ್ತು.ಶರಣಪ್ಪ ಮೊಕದ್ದಮೆಯಲ್ಲಿನ ನಿರ್ಣಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಅರ್ಜಿದಾರರು ನ್ಯಾಯಿಕ ಅಧಿಕಾರಿಯಾಗಿದ್ದು, ಅವರನ್ನು ಅಮಾನತ್ತಿನಲ್ಲಿರಿಸಲಾಗಿತ್ತು ಮತ್ತು ಭ್ರಷ್ಟಾಚಾರ ತಡೆ ಅಧಿನಿಯಮ, 1988 ರ ಅಡಿಯಲ್ಲಿ ಅಪರಾಧಗಳನ್ನು ಎಸಗಿರುವುದನ್ನು ಆರೋಪಿಸಿದ ಗುನ್ನೆಯನ್ನು (ಕ್ರೈಮ್) ಅವರ ವಿರುದ್ಧ ದಾಖಲಿಸಲಾಗಿತ್ತು.ಅದನ್ನು ರದ್ದುಗೊಳಿಸಲು ಅವರು ಅರ್ಜಿ ಸಲ್ಲಿಸಿದ್ದರು.ಈ ನ್ಯಾಯಾಲಯದ ಮುಂದೆ ಮಂಡಿಸಿದ ಮುಖ್ಯ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಯೆಂದರೆ, ಈ ನ್ಯಾಯಾಲಯದ ವಿಚಕ್ಷಣಾ ಕೋಶವು, ಸಿಆರ್.ಪಿ.ಸಿ.ಯ 2 (ಎಸ್) ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಪೊಲೀಸ್ ಠಾಣೆಯೇ ಎಂಬುದಾಗಿತ್ತು.1985 ರ ಸದರಿ ಅಧಿನಿಯಮದ 3 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ನ್ಯಾಯಿಕ ಅಧಿಕಾರಿಯು ಸಂರಕ್ಷಣೆ ಹೊಂದಿರುವರೇ ಎಂಬ ವಿಷಯವನ್ನು ಪರಿಗಣಿಸಿರಲಿಲ್ಲ.ಆದ್ದರಿಂದ, ಎರಡೂ ನಿರ್ಣಯಗಳು ಈ ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವುದಿಲ್ಲ.

23. ಈಗ, 1985 ರ ಸದರಿ ಅಧಿನಿಯಮದ 3 ನೇ ಪ್ರಕರಣದ ( 1) ನೇ ಉಪ ಪ್ರಕರಣಕ್ಕೆ ಬರೋಣ. ನೀಲೇಶ್ ಸಿ. ಓಝಾ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಬಾಂಬೆ ಉಚ್ಚ ನ್ಯಾಯಾಲಯದ ನಿರ್ಣಯವನ್ನು ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ.ಚ ಸದರಿ ನಿರ್ಣಯದ 29 ಮತ್ತು 30 ನೇ ಕಂಡಿಕೆಗಳನ್ನು ಹೀಗೆ ಓದಲಾಗಿದೆ:

"29. ಮೇಲೆ ಹೇಳಿದ ಕಾರಣಗಳಿಗಾಗಿ, ನ್ಯಾಯಾಧೀಶರ (ಸಂರಕ್ಷಣಾ) ಅಧಿನಿಯಮ, 1985 ರ 3 ( 1) ನೇ ಪ್ರಕರಣವು ಮತ್ತು ಭಾರತ ದಂಡ ಸಂಹಿತೆ, 1861 ರ 77 ನೇ ಪ್ರಕರಣವು ನೀಡಿದ ಸಂರಕ್ಷಣೆಯ ದೃಷ್ಟಿಯಿಂದ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳು, ದಾಮನ್, ದಿಯು, ದಾದ್ರಾ ಮತ್ತು ನಗರ್ ಹವೇಲಿ ಒಕ್ಕೂಟ ರಾಜ್ಯಕ್ಷೇತ್ರಗಳಲ್ಲಿನ ಯಾವುದೇ ನ್ಯಾಯಾಲಯವು, ನ್ಯಾಯಾಲಯ ಆವರಣಗಳಲ್ಲಿ ನ್ಯಾಯಿಕ ಆದೇಶವನ್ನು ಹೊರಡಿಸುವ ಮೂಲಕ ಅಥವಾ ಯಾವುದೇ ಕೃತ್ಯವನ್ನು ಅಥವಾ ಲೋಪವನ್ನು ಎಸಗುವ ಮೂಲಕ ಅಥವಾ ಏನನ್ನೇ ಆಗಲಿ ಮಾಡುವ ಮೂಲಕ ಅಥವಾ ಯಾವುದೇ ಪದಗಳನ್ನು ಮಾತನಾಡುವ ಮೂಲಕ ಅಧಿಕೃತ ಕರ್ತವ್ಯದ ಅಥವಾ ನ್ಯಾಯಿಕ ಪ್ರಕಾರ್ಯದ ನಿರ್ವಹಣೆಯಲ್ಲಿ ಅಥವಾ ಹಾಗೆ ತಾತ್ಪರ್ಯವಾಗುವ ನಿರ್ವಹಣೆಯಲ್ಲಿ ಎಸಗಿರುವನೆಂದು ಆರೋಪಿಸಲಾದ ಅಪರಾಧದ ಸಂಬಂಧದಲ್ಲಿ ಈ ನ್ಯಾಯಾಲಯದ ನ್ಯಾಯಾಧೀಶನ ಅಥವಾ ಯಾರೇ ನ್ಯಾಯಿಕ ಅಧಿಕಾರಿಯ ವಿರುದ್ಧ ತನಿಖೆ ನಡೆಸಲು ಸಿಆರ್.ಪಿ.ಸಿ.ಯ 156 ( 3) ನೇ ಪ್ರಕರಣವನ್ನು ಒಳಗೊಂಡು, ಅಪರಾಧ ಪ್ರಕ್ರಿಯಾ ಸಂಹಿತೆ, 1973 ರ ಯಾವುದೇ ಉಪಬ ಂ ಧದ ಅಡಿಯಲ್ಲಿನ ಯಾವುದೇ ಅಭಿಯೋಜನೆಯನ್ನಾಗಲಿ ಅಥವಾ ಯಾವುದೇ ದೂರನ್ನಾಗಲಿ ಪುರಸ್ಕರಿಸತಕ್ಕದ್ದಲ್ಲ.

30. ಕೆಲವು ಇತರ ಸಾಕ್ಷ್ಯದೊಂದಿಗೆ ನ್ಯಾಯಾಲಯ ಆವರಣಗಳಲ್ಲಿ ನ್ಯಾಯಿಕ ಆದೇಶವನ್ನು ಹೊರಡಿಸುವ ಮೂಲಕ ಅಥವಾ ಕೃತ್ಯವನ್ನು ಎಸಗುವ ಮೂಲಕ ಅಪರಾಧವಾಗಿ ರೂಪುಗೊಳ್ಳುವ ಕೃತ್ಯವನ್ನು

ಮಾಡಿದನೆಂದು ಆರೋಪಿಸಲಾದಲ್ಲಿ ಮತ್ತು ಅದರ ಆಧಾರದ ಮೇಲೆ ಮೊಕದ್ದಮೆಯು ಇ.ಎಸ್. ಸಂಜೀವ ರಾವ್ -ವಿರುದ್ಧ ಸಿಬಿಐ, ಮುಂಬೈ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು ವಿವರಿಸಿದಂತೆ, ನ್ಯಾಯಾಧೀಶರ (ಸಂರಕ್ಷಣಾ) ಅಧಿನಿಯಮ, 1985 ರ 3 ( 2) ನೇ ಪ್ರಕರಣದ ಅಡಿಯಲ್ಲಿ ಬಂದಲ್ಲಿ, ಅಭಿಯೋಜನೆಯನ್ನು ಪ್ರಾರಂಭಿಸಲು ಸಕ್ಷಮ ಪ್ರಾಧಿಕಾರದ ಪೂರ್ವ-ಮಂಜೂರಾತಿಯ ಅಗತ್ಯವಿರುತ್ತದೆ.ಪೂರ್ವ-ಮಂಜೂರಾತಿ ಇಲ್ಲವೆಂದು ಒಮ್ಮೆ ಅದು ಗಮನಿಸಿದರೆ, ಯಾರೇ ವಿಶೇಷ ನ್ಯಾಯಾಧೀಶ ಅಥವಾ ದಂಡಾಧಿಕಾರಿಯು, ಅಪರಾಧ ಪ್ರಕ್ರಿಯಾ ಸಂಹಿತೆ, 1973 ರ 156 ( 3) ನೇ ಪ್ರಕರಣವನ್ನು ಅನ್ವಯಿಸುವ ಮೂಲಕ ನ್ಯಾಯಾಧೀಶನ ವಿರುದ್ಧ ತನಿಖೆಯನ್ನು ಆದೇಶಿಸುವ ಅಧಿಕಾರವನ್ನು ಹೊಂದಿರುವುದಿಲ್ಲ.ಮೇಲೆ ಇತ್ಯರ್ಥವಾದ ಕಾನೂನಿನ ನಿಲುವಿನ ಹಿನ್ನೆಲೆಯಲ್ಲಿ, ಅಂಥ ಸಂದರ್ಭದಲ್ಲಿ, ಸತ್ರ ನ್ಯಾಯಾಲಯವಾಗಲಿ ಅಥವಾ ದಂಡಾಧಿಕಾರಿಗಳ ನ್ಯಾಯಾಲಯವಾಗಲಿ, ದೂರುದಾರನ ಹೇಳಿಕೆಯನ್ನು ಅಥವಾ ಆತನ ಸಾಕ್ಷ್ಯವನ್ನು ದಾಖಲಿಸುವ ಉದ್ದೇಶಕ್ಕಾಗಿಯೂ ಸಹ ಅಪರಾಧ ಪ್ರಕ್ರಿಯಾ ಸಂಹಿತೆ, 1973 ರ 156 ( 3) ನೇ ಪ್ರಕರಣದ ಅಡಿಯಲ್ಲಿ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ.

ಈಗಾಗಲೇ ನಾವು ದಾಖಲಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಬಾಂಬೆ ಉಚ್ಚ ನ್ಯಾಯಾಲಯವು ತೆಗೆದುಕೊಂಡ ಅಭಿಪ್ರಾಯದೊಂದಿಗೆ ನಾವು ಸಹಮತ ಹೊಂದಿದ್ದೇವೆ.

24, 3 ನೇ ಪ್ರಕರಣದ ( 2) ನೇ ಉಪ-ಪ್ರಕರಣವು, 1985 ರ ಸದರಿ ಅಧಿನಿಯಮದ 3 ನೇ ಪ್ರಕರಣದ ( 1) ನೇ ಉಪ-ಪ್ರಕರಣಕ್ಕೆ ವಿನಾಯಿತಿಯಾಗಿದೆ.ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಾಜ್ಯ ಸರ್ಕಾರ ಅಥವಾ ಭಾರತದ ಸರ್ವೋಚ್ಚ ನ್ಯಾಯಾಲಯ ಅಥವಾ ಯಾವುದೇ ಉಚ್ಚ ನ್ಯಾಯಾಲಯ ಚ ಚ ಅಥವಾ ಯಾವುದೇ ಪ್ರಾಧಿಕಾರವು ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ವ್ಯಕ್ತಿಯ ವಿರುದ್ಧ ಅಂಥ ಕ್ರಮವನ್ನು ತೆಗೆದುಕೊಂಡಾಗ ಮಾತ್ರವೇ ಈ ವಿನಾಯಿತಿಯು ಅನ್ವಯವಾಗುತ್ತದೆ.3 ನೇ ಪ್ರಕರಣದ ( 2) ನೇ ಉಪ-ಪ್ರಕರಣದ ಅಡಿಯಲ್ಲಿ ಉಪಬಂಧಿಸಿದಂತೆ ಮೊದಲನೇ ಪ್ರತಿವಾದಿಯು ಪ್ರಾಧಿಕಾರವಲ್ಲ.ಆದುದರಿಂದ, ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯು, ಎರಡನೇ ಪ್ರತಿವಾದಿಯ ವಿರುದ್ಧ ಮೊದಲನೇ ಪ್ರತಿವಾದಿಯು ದಾಖಲಿಸಿದ ದೂರನ್ನು ಪುರಸ್ಕರಿಸುವಂತಿರಲಿಲ್ಲ ಎಂಬುದು ಅತ್ಯಂತ ಸ್ಪಷ್ಟವಾಗಿದೆ ಮತ್ತು ವಾಸ್ತವದಲ್ಲಿ, ಯಾವ ನ್ಯಾಯಿಕ ದಂಡಾಧಿಕಾರಿಯ ಮುಂದೆ ದೂರು ಇತ್ಯರ್ಥದಲ್ಲಿತ್ತೋ ಅವರು, ಎರಡನೇ ಪ್ರತಿವಾದಿಯ ವಿರುದ್ಧವಿದ್ದಂತೆ ಅದನ್ನು ವಜಾಗೊಳಿಸಬೇಕಾಗಿತ್ತು.

25. ಈಗ, ನಾವು ಮಂಜೂರಾತಿ ನೀಡುವ ವಿಷಯಕ್ಕೆ ಬರೋಣ. ಮುಖ್ಯ ನ್ಯಾಯಾಧೀಶರನ್ನು ಉದ್ದೇಶಿಸಿ ಬರೆದದಿನಾಂಕ: 27 ನೇ ಮೇ, 2019 ರ ಪತ್ರದಲ್ಲಿ, ಮೊದಲನೇ ಪ್ರತಿವಾದಿಗಳು ನಿರ್ದಿಷ್ಟವಾಗಿ ಮಂಜೂರಾತಿ ನೀಡಲು ಕೋರಿರಲಿಲ್ಲ ಮತ್ತು ಎರಡನೇ ಪ್ರತಿವಾದಿಗಳನ್ನು ಅಭಿಯೋಜನೆಗೊಳಪಡಿಸಲು ಅನುಮತಿಗೆ ಅರ್ಜಿ ಸಲ್ಲಿಸಿರಲಿಲ್ಲ.ನ್ಯಾಯಿಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುವಾಗ ಎರಡನೇ ಪ್ರತಿವಾದಿಗಳ ಆರೋಪಿತ ಕ್ರಮಗಳ ಬಗ್ಗೆ, ಮೊದಲನೇ ಪ್ರತಿವಾದಿಗಳು ಅಹವಾಲನ್ನು ಮಾಡಿದ್ದರಿಂದ, ಅವರು ಎರಡನೇ ಪ್ರತಿವಾದಿಗಳ ಕ್ರಮಗಳಿಂದ ಬಾಧಿತರಾಗಿದ್ದರೆ, ನ್ಯಾಯಿಕ ದೃಷ್ಟಿಯಿಂದ ಕ್ರಮ ತೆಗೆದುಕೊಳ್ಳಲು ಮುಖ್ಯ ನ್ಯಾಯಾಧೀಶರ ಕಾರ್ಯದರ್ಶಿಗಳು ಎರಡನೇ ಪ್ರತಿವಾದಿಗಳಿಗೆ ತಿಳಿಸಿದ್ದರು.ವಾಸ್ತವವಾಗಿ ಅದು, ದೂರಿನಲ್ಲಿ ಮತ್ತು ನಿರ್ದಿಷ್ಟವಾಗಿ IX ನೇ ಕಂಡಿಕೆಯಲ್ಲಿ, ಎರಡನೇ ಪ್ರತಿವಾದಿಯನ್ನು ಅಭಿಯೋಜನೆಗೊಳಪಡಿಸಲು ಮೊದಲನೇ ಪ್ರತಿವಾದಿಗಳಿಗೆ ಮಂಜೂರಾತಿ ನೀಡಲಾಗಿತ್ತು ಎಂದು ಮೊದಲನೇ ಪ್ರತಿವಾದಿಗಳು ಸಮರ್ಥಿಸಿಕೊಂಡ

ಮೊಕದ್ದಮೆಯೂ ಸಹ ಆಗಿರಲಿಲ್ಲ.IX ನೇ ಕಂಡಿಕೆಯಲ್ಲಿ ನಿಶ್ಚಿತವಾಗಿ ಹೇಳಿದ್ದೇನೆಂದರೆ, ಈ ವಿಷಯದಲ್ಲಿ ವ್ಯವಹರಣೆ ನಡೆಸಲು ಈ ನ್ಯಾಯಾಲಯವು ಅನುಮತಿ ನೀಡಿದೆ ಎಂಬುದಾಗಿತ್ತು.ಹಾಗಾಗಿ, ಎರಡನೇ ಪ್ರತಿವಾದಿಗಳನ್ನು ಅಭಿಯೋಜನೆಗೊಳಪಡಿಸಲು ಅಂಥ ಯಾವುದೇ ಮಂಜೂರಾತಿಯು ಅಸ್ತಿತ್ವದಲ್ಲಿಲ್ಲ.

26. ಈಗ, ಸಿಆರ್.ಪಿ.ಸಿ.ಯ 482 ನೇ ಪ್ರಕರಣದ ಸರಳ ಓದುವಿಕೆಯ ಆಧಾರದ ಮೇಲೆ, ಸ್ವಯಂಪ್ರೇರಿತವಾಗಿ ಅಧಿಕಾರವನ್ನು ಸೂಕ್ತವಾಗಿ ಚಲಾಯಿಸಿರುವುದಕ್ಕೆ ಸಂಬಂಧಿಸಿದ ವಾದಕ್ಕೆ ಬರುವುದಾದರೆ, ಸ್ವಯಂಪ್ರೇರಿತ ಅಧಿಕಾರ ಚಲಾಯಿಸುವ ಅಧಿಕಾರ ಉಚ್ಚ ನ್ಯಾಯಾಲಯಕ್ಕೆ ನಿಹಿತವಾಗಿದೆ.ಈ ಹಂತದಲ್ಲಿ, ಪಾಪುಲರ್ ಚ ಮುತ್ತಯ್ಯ -ವಿರುದ್ಧ ರಾಜ್ಯ 6 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಉಲ್ಲೇಖಿಸುವುದು ಅವಶ್ಯಕ.30 ನೇ ಕಂಡಿಕೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು ಹೀಗೆ ಅಭಿಪ್ರಾಯಪಟ್ಟಿದೆ:

"30. ಪ್ರಾಸಂಗಿಕ ಅಥವಾ ಪೂರಕ ಅಧಿಕಾರದ ಸಂಬಂಧದಲ್ಲಿ, ಸ್ಪಷ್ಟವಾಗಿ, ಉಚ್ಚ ನ್ಯಾಯಾಲಯವು, ವ್ಯವಹರಣೆಗಳ ಸ್ವರೂಪ ಚ ಏನೇ ಆಗಿರಲಿ, ಅದನ್ನು ಪರಿಗಣಿಸದೆ ಅದರ ಅಂತರ್ನಿಹಿತ ಅಧಿಕಾರವನ್ನು ಚಲಾಯಿಸಬಹುದಾಗಿದೆ.ಅದರಲ್ಲಿನ ಪ್ರಕ್ರಿಯಾ ನಿರ್ಬಂಧಗಳ ಮೂಲಕ ಅದು ಅಡೆತಡೆಗೊಳಪಡುವುದಿಲ್ಲ:

(i) ನ್ಯಾಯದ ಹಿತದೃಷ್ಟಿಯಿಂದ ಸ್ವಯಂಪ್ರೇರಿತವಾಗಿ ಅಧಿಕಾರವನ್ನು ಚಲಾಯಿಸಬಹುದಾಗಿದೆ.ಅಂಥ ಅಧಿಕಾರವನ್ನು ಒಪ್ಪದಿದ್ದರೆ, ಆರೋಪಿಗೆ ಅನ್ಯಾಯವಾಗುವುದಕ್ಕೆ ಸಹ ದಾರಿ ಮಾಡಿಕೊಡಬಹುದಾಗಿದೆ.

(ii) ಅಂಥ ಅಧಿಕಾರವನ್ನು ಮೇಲ್ಮನವಿ ಮತ್ತು ಪುನರೀಕ್ಷಣಾ ಅಧಿಕಾರವ್ಯಾಪ್ತಿಯೊಂದಿಗೆ ಏಕಕಾಲಿಕವಾಗಿ ಚಲಾಯಿಸಬಹುದಾಗಿದೆ ಹಾಗೂ ಅದಕ್ಕಾಗಿ ಯಾವುದೇ ಔಪಚಾರಿಕ ಅರ್ಜಿಯನ್ನು ಸಲ್ಲಿಸಬೇಕಾದ ಅಗತ್ಯವಿರುವುದಿಲ್ಲ.

(iii) ಆದಾಗ್ಯೂ, ಅಪರಾಧ ಪ್ರಕ್ರಿಯಾ ಸಂಹಿತೆಯ 482 ನೆ ಪ್ರಕರಣದ ಅಡಿಯಲ್ಲಿನ ಅಧಿಕಾರವು ಅನಿಯಮಿತವಲ್ಲವೆಂಬುದು ಸ ಂ ಶಾಯಾತೀತವಾಗಿದೆ.ಸಂಹಿತೆಯು ಅನ್ವಯವಾಗದಿರುವಲ್ಲಿ, ನ್ಯಾಯಾಲಯದ ಅಧಿಕಾರವನ್ನು ಸಮಗ್ರವೆಂದು ಪರಿಗಣಿಸದಿರುವಲ್ಲಿ ಅಥವಾ ಸಂಹಿತೆಯಲ್ಲಿ ನಿರ್ದಿಷ್ಟ ಉಪಬಂಧವಿದ್ದಲ್ಲಿ; ಅಥವಾ ಶಾಸನವು ವಿಶೇಷ ಕಾನೂನಿನ ಅನ್ವಯವನ್ನು ಒಳಗೊಳ್ಳದಿರುವ ಕಾರಣ ಸಂಹಿತೆಯ ಪರಿಧಿಯಲ್ಲಿ ಬರದೆ ಇದ್ದಲ್ಲಿ, ಅದನ್ನು ಇತರ ವಿಷಯಗಳ ಜೊತೆಗೆ ಚಲಾಯಿಸಬಹುದಾಗಿದೆ.ಅದು ನ್ಯಾಯದ ಹಿತದೃಷ್ಟಿಯಿಂದ ಕಾವ್ಯ ನಿರ್ವಹಿಸುತ್ತದೆ.ಆದ್ದರಿಂದ, ಅದು ಏಕತ್ರವಾಗಿ ಅಸ್ತಿತ್ವದಲ್ಲಿರುವ ನೈಜ ಮತ್ತು ವಾಸ್ತವಿಕ ಸಮರ್ಥನೆಯಾಗಿದೆ. "

(ಒತ್ತು ನೀಡಲಾಗಿದೆ)

482 ನೇ ಪ್ರಕರಣದಲ್ಲಿ, ಈ ನ್ಯಾಯಾಲಯದ ಸ್ವಯಂಪ್ರೇರಣೆಯ ಅಧಿಕಾರವನ್ನು ಸಾರ್ವಜನಿಕ ಹಿತಾಸಕ್ತಿಯಲ್ಲಿ ಮಾತ್ರವೇ ಚಲಾಯಿಸಬಹುದು ಎಂದು ಸೂಚಿಸುವಂಥದ್ದೇನೂ ಇಲ್ಲ. ಅದನ್ನು ಸಾರ್ವಜನಿಕ ಹಿತಾಸಕ್ತಿಯಲ್ಲಿ ಮಾತ್ರವೇ ಚಲಾಯಿಸಬಹುದು ಎಂದು ಭಾವಿಸಿದರೂ, ಪ್ರಸ್ತುತ ಅರ್ಜಿಯಲ್ಲಿ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವ ಅಂಶ ಖಂಡಿತವಾಗಿಯೂ ಇದೆ. ನ್ಯಾಯಿಕ ಸ್ವಾತಂತ್ರ್ಯವು ಭಾರತ ಸಂವಿಧಾನದ ಮೂಲ ಸ್ವರೂಪಗಳಲ್ಲಿ ಒಂದಾಗಿದೆ.1985 ರ ಸದರಿ ಅಧಿನಿಯಮದ 3 ನೇ ಪ್ರಕರಣದ ( 1) ನೇ ಉಪ-ಪ್ರಕರಣವು ನೀಡಿದ ಸಂರಕ್ಷಣೆ ಏನೇ ಆಗಿರಲಿ, ನ್ಯಾಯಿಕ ಕರ್ತವ್ಯವನ್ನು ನಿರ್ವಹಿಸುವಾಗ ನ್ಯಾಯಿಕ

ಅಧಿಕಾರಿಗಳು ಮಾಡಿದ ಕೃತ್ಯ ಅಥವಾ ಆಡಿದ ಮಾತುಗಳ ಸಂಬಂಧದಲ್ಲಿ ಕ್ರಿಮಿನಲ್ ನ್ಯಾಯಾಲಯಗಳ ಮುಂದೆ ಅವರನ್ನು ಅಭಿಯೋಜನೆಗೆ ಒಳಪಡಿಸಿದರೆ, ನ್ಯಾಯಿಕ ಅಧಿಕಾರಿಗಳು ಭಯ ಅಥವಾ ಆತಂಕವಿಲ್ಲದೆ ಅವರ ಕರ್ತವ್ಯಗಳನ್ನು ನಿರ್ವಹಿಸುವ ಸ್ಥಿತಿಯಲ್ಲಿರುವುದಿಲ್ಲ.ಆದುದರಿಂದ, ಈ ನ್ಯಾಯಾಲಯವು, ಸಿಆರ್.ಪಿ.ಸಿ.ಯ 482 ನೇ ಪ್ರಕರಣದ ಅಡಿಯಲ್ಲಿ ಕ್ರಮವನ್ನು ಪ್ರಾರಂಭಿಸುವಲ್ಲಿ ಸಂಪೂರ್ಣವಾಗಿ ನ್ಯಾಯಯುತವಾಗಿ ನಡೆದುಕೊಂಡಿದೆ.ಮೊದಲನೇ ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದಂತೆ ಸಿಆರ್.ಪಿ.ಸಿ.ಯ 482 ನೇ ಪ್ರಕರಣದ ಅಡಿಯಲ್ಲಿ ಸ್ವಯಂಪ್ರೇರಣೆಯ ವ್ಯವಹರಣೆಗಳನ್ನು ಪ್ರಾರಂಭಿಸುವ ಅಧಿಕಾರವನ್ನು ಕಿತ್ತುಕೊಳ್ಳಲಾಗುವುದಿಲ್ಲ.

27, ಸಂಬಂಧಪಟ್ಟ ಪ್ರಧಾನ ಜಿಲ್ಲಾ ನ್ಯಾಯಾಧೀಶರ ಮುಖಾಂತರ ರಾಜ್ಯದಲ್ಲಿನ ಎಲ್ಲಾ ನ್ಯಾಯಿಕ ಅಧಿಕಾರಿಗಳಿಗೆ ಈ ತೀರ್ಪಿನ ಪ್ರತಿಯನ್ನು ಪರಿಚಲನೆ ಮಾಡುವುದು ಅವಶ್ಯಕವಾಗಿದೆ.ಮಾನ್ಯ ನ್ಯಾಯಾಲಯದ ಸಲಹೆಗಾರರು ಸಲ್ಲಿಸಿದ ಸೇವೆಗಳಿಗಾಗಿ ನಾವು ಅವರನ್ನು ಪ್ರಶಂಶಿಸುತ್ತೇವೆ.

28. ಕಾನೂನಿನ ನಿಲುವು ಇಲ್ಲಿ ಸಾಧಿತವಾಗಿರುವುದರಿಂದ, ನಾವು ಈ ಮುಂದಿನಂತೆ ಆಜ್ಞೆ ಹೊರಡಿಸಿದ್ದೇವೆ:

ಆಜ್ಞೆ

( i) ಪಿಸಿಆರ್ಸಂಖ್ಯೆ: 11/2019 ಆಗಿ ಹಗರಿಬೊಮ್ಮನಹಳ್ಳಿಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ಮುಂದೆ ಈಗ ಬಾಕಿ ಇರುವ ಮೊದಲನೇ ಪ್ರತಿವಾದಿಗಳು ಸಲ್ಲಿಸಿದ ದೂರನ್ನು ರದ್ದುಗೊಳಿಸಲಾಗಿದೆ ಮತ್ತು ಎರಡನೇ ಪ್ರತಿವಾದಿಗಳ ವಿರುದ್ಧದಷ್ಟರಮಟ್ಟಿಗೆ ಅದನ್ನು ತಳ್ಳಿಹಾಕಲಾಗಿದೆ;

(i) ಆದಾಗ್ಯೂ, ಮೊಕದ್ದಮೆಯಲ್ಲಿನ ಇತರ ಆರೋಪಿಗಳ ವಿರುದ್ಧದ ಈ ದೂರಿಗೆ ಸಂಬಂಧ ಪಡುವಷ್ಟರಮಟ್ಟಿಗೆ ಕ್ರಮವನ್ನು ಜರುಗಿಸತಕ್ಕದ್ದು ಎಂಬುದನ್ನು ನಾವು ಸ್ಪಷ್ಟಪಡಿಸುತ್ತೇವೆ;

(iii) ಮೇಲಿನ ನಿಬಂಧನೆಗಳ ಮೇರೆಗೆ ಅರ್ಜಿಯನ್ನು ಪುರಸ್ಕರಿಸಲಾಗಿದೆ;

(iv) ಎಲ್ಲಾ ಪ್ರಧಾನ ಜಿಲ್ಲಾ ನ್ಯಾಯಾಧೀಶರಿಗೆ ಈ ತೀರ್ಪಿನ ಸಾಫ್ಟ್ ಪ್ರತಿಯನ್ನು ಕಳುಹಿಸಲು ಮತ್ತು ಪ್ರತಿಯಾಗಿ ಅವರು ಅದನ್ನು ಸಂಬಂಧಪಟ್ಟ ಜಿಲ್ಲೆಗಳಲ್ಲಿನ ಎಲ್ಲಾ ನ್ಯಾಯಿಕ ಅಧಿಕಾರಿಗಳಿಗೆ ಕಳುಹಿಸಲು ಸ ಚಿ ಸುವ ಂ ತ ವಿಲ್ ಖ ನಾದಿ ಕಾರಿ (ನ್ಯಾಯಿಕ) ಯವರಿಗೆ ನಾವು ನಿರ್ದೇಶಿಸುತ್ತೇವೆ.